2. OBITUARY REFERENCES

MR. SPEAKER.— Before we commence our business, I have a sad duty to perform which is to make a reference to the demise of the following persons since the House met last.

The House has lost a valuable person in the demise of Smt.Sumati B. Madiman, Deputy Speaker on 21-12-1980. Smt. Sumati B. Madiman was a Member of the Legislative Assembly between 1972-1977 and was again re elected to the Legislative Assembly during 1978. She was elected Deputy Speaker on 10th August, 1978 and continued as such till she breathed her last. She was deeply interested in social work and the Welfare of Women and Children. She endeared herself to one and all by her amiable and graceful personality. The dignified manner in which she conducted the deliberations of the House will be remembered by all of us for a long time to come. It is very sad that the hand of destiny should have snatched her away at a comparatively early age in life.

The State and the Country have lost an outstanding administrator in the death of Sri K. Hanumanthaiya on 1st December, 1980. Sri Hanumanthaiya was a Member of the Representative Assembly 1941-1949. He also served in the Constituent Assembly. He was a Member of the Legislative Assembly during 1949-1950 and was re-elected to the Mysore Legislative Assembly for two terms i.e., from 1952-1957 and 1957-1962. He served as Chief Minister of Mysore till 1956. He was a Member of Parliament, Chairman of the Administrative Reforms Commission and also Union Minister for Railways. Besides being a veteran politician, Sri Hanumanthaiya was the architect of Vidhana Soudha where we are sitting.

The State is very much poorer by the demise of Sri M. V. Krishnappa on 1st August, 1980. Sri. Krishnappa was a Member of the Representative Assembly during 1945-1949 and a Member of the Parliament during 1952-1957. He served as a Member of the Legislative Council between 1962-1968. He was Minister for Revenue in Mysore State between 1962-1967.

On 20th August, 1980 Sri N. Rachaiah a former Member of the Legislative Assembly expired. Sri Rachaiah was a Member from 1962-1967. He was a staunch Congress worker and underwent imprisonment several times for taking part in freedom movement.

Sri M. Govnda Reddy, a Member of the Representative Assembly between 1949-1951 expired on 29-8-1980. He was a Member of Rajya Sabha during 1952-1968.

Sri Solur Siddappa a Member of the Representative Assembly between 1945-1949 expired on 30th December, 1980. He was also a Member of the Legislative Assembly for two terms between 1952-1957 and 1967-1971.

Sri B.N. Rame Gowda former Member of Legislative Assembly expired on 30th August, 1980.

One more Member of the Representative Assembly Dr. K.R. Sreekanteswar expired on 12th January, 1981. He was a vetern co-operator.

I am sure the House will join me in expressing our sense of sorrow on the passing away of Smt. Sumati Madiman, Sriyuths Kengal Hanumanthaiya, M.V. Krishnappa, N. Rachaiah, M. Govinda Reddy, Solur Siddappa, B. N. Rame Gowda and Dr. K R. Sreekanteswar.

SRI D. DEVARAJ URS.—Sir, One Sri P. K. Kambli from Kundagol who was a member of this House for nearly 10 years between 1956-66 expired recently. Perhaps since he has expired recently that might not have come to the notice of the Hon'ble Speaker. There fore, the same may kindly be included.

MR. SPEAKER.— That will also be included in the obituary references.

† ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ ವಿಧಾನಸಭೆಯ ಉಪಾಧ್ಯಕ್ಷರಾಗಿದ್ದಂತಹ ಶ್ರೀಮತಿ ಸುಮತಿ ಬಿ. ಮಡಿಮನ್‌ರವರು ಇವತ್ತು ನಮ್ಮ ಜೊತೆಯಲ್ಲಿಲ್ಲ. ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನಿಧನದಿಂದ ನಮ್ಮರಾಜ್ಯಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರು ನಮ್ಮರಾಜ್ಯದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಬಹಳ ಉತ್ತಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ನಿಧನದಿಂದ ಒಬ್ಬ ಶ್ರೇಷ್ಠ ವ್ಯಕ್ತಿಯನ್ನು ನಾವು ಕಳೆದುಕೊಂಡಂತಾಗಿದೆ. ಅವರು ಶಾಸಕರಲ್ಲದೆ ಸಮಾಜಸೇವಕಿಯೂ ಕೂಡ ಆಗಿದ್ದರು. ಅವರು ವಿಧಾನಸಭೆಯ ಉಪಾಧ್ಯಕ್ಷರಾಗಿ ಈ ಸಭೆಯ ಕಾರ್ಯಕಲಾಪಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಅವರು ಅನೇಕ ಸಂಘಸಂಸ್ಥೆಗಳಲ್ಲಿ ತಮ್ಮ ಸೇವಾಕ್ಷೇತ್ರವನ್ನು ಇಟ್ಟುಕೊಂಡಿದ್ದರು. ಅವರು ೧೯೭೨ನೇ ಇಸವಿಯಲ್ಲಿ ಮೊದಲನೆಯ ಬಾರಿ ಕಾಂಗ್ರೆಸ್ ಪಕ್ಷದಿಂದ ವಿಧಾನಸಭೆಗೆ ಆಯ್ಕೆಯಾಗಿ ಎಲ್ಲಾ ಕಾರ್ಯಕಲಾಪಗಳಲ್ಲೂ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡತಕ್ಕಂತಹ ವ್ಯಕ್ತಿಯಾಗಿದ್ದರು. ಎಲ್ಲಾ ಸದಸ್ಯರ ಜೊತೆಯಲ್ಲಿಯೂ ಯಾವುದೇ ತರಹ ಭೇದಭಾವ ವಿಲ್ಲದೆ ಬಹಳ ಸರಳತೆಯಿಂದ ವರ್ತಿಸುತ್ತಿದ್ದರು. ಅನೇಕ ಸಮಿತಿಗಳಲ್ಲಿ ಅವರು ಸದಸ್ಯರಾಗಿದ್ದರು. ಜೊತೆಗೆ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಸದಸ್ಯರಾಗಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂಡಳಿಯಲ್ಲಿ ಸದಸ್ಯರಾಗಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರು ತಮ್ಮ ಕ್ಷೇತ್ರದಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ ಮತ್ತು ಅವರ ಕ್ಷೇತ್ರದ ಎಲ್ಲಾ ವರ್ಗದ ಜನಗಳಲ್ಲೂ ನೇರವಾದ ಸಂಪರ್ಕವನ್ನು ಇಟ್ಟುಕೊಂಡಿದ್ದರು. ನಾನು ಸಹ ಮಂತ್ರಿಯಾಗಿದ್ದಾಗ ಅನೇಕ ಸಂದರ್ಭಗಳಲ್ಲಿ ಅವರನ್ನು ನೋಡಿದ್ದೇನೆ, ಅವರು ವೈಯಕ್ತಿಕವಾಗಿ ಅಧಿಕಾರಿಗಳ ವರ್ಗಾವರ್ಗಿ ವಿಷಯದಲ್ಲಾಗಲೀ ಮತ್ತಾವುದೇ ವಿಷಯದಲ್ಲಾಗಲೀ ಯಾವುದೇ ಪ್ರಭಾವವನ್ನು ಸರ್ಕಾರದ ಮೇಲೆ ಬೀರುತ್ತಿರಲಿಲ್ಲ.

---

† Indicates that remarks or speeches have not been revised by the member concerned.

ಅವರ ಕ್ಷೇತ್ರದಲ್ಲಿ ಜನಗಳಿಗೆ ಉಪಯುಂಕ್ತ ವಾಗುವಂತಹ ಕೆಲಸಗಳನ್ನು ಮಾಡಿದ್ದಾರೆ. ಹಿಂದುಳಿದ ಪ್ರದೇಶಗಳ ಕೆಲಸ ಆಗಬೇಕೆಂದು ಅನೇಕ ರೀತಿಯಲ್ಲಿ ಪ್ರಯತ್ನಮಾಡಿದ್ದಾರೆ. ಹಿಂದುಳಿದ ಪ್ರದೇಶಗಳಿಗೆ ಆಗಾಗ ಭೇಟಿಕೊಟ್ಟು ಬಡವರನ್ನು ಬಹಳ ದಯೆಯಿಂದ ಕಾಣುತ್ತಿದ್ದರು. ಅಂತಹವರು ವಿಧಿವಶರಾಗಿ ಕಳೆದ ೨೧-೧೨-೧೯೬೦ ರಂದು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಈಸಭೆಯ ಉಪಾಧ್ಯಕ್ಷರಾಗಿ ಎಲ್ಲರನ್ನು ಏಕರೀತಿಯಲ್ಲಿ ಕಂಡುಕೊಂಡು ಎಲ್ಲರ ಮೆಚ್ಚಿಗೆಯನ್ನು ಪಡೆದವರಾಗಿದ್ದರು. ಇಂತಹವರು ನಮ್ಮನ್ನು ಬಿಟ್ಟು ಹೋಗಿದ್ದು ಬಹುಶಃ ವಿಧಿ ನಿಯಮವೆಂದು ಹೇಳಬಹುದು. ವಿಧಿ ನಿಯಮವನ್ನು ಯಾರೂ ಮೀರಲಿಕ್ಕೆ ಸಾಧ್ಯವಿಲ್ಲ. ಅವರ ನಿಧನದಿಂದ ನಮಗೆಲ್ಲಾ ತುಂಬ ದುಃಖವಾಗಿದೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಟ್ಟು ಅವರ ಕುಟುಂಬ ವರ್ಗದವರಿಗೆ ಅವರ ಒಂದು ನಿಧನದಿಂದ ಆದಂಥ ದುಃಖವನ್ನು ತಡೆದುಕೊಳ್ಳುವಂತಹ ಶಕ್ತಿಯನ್ನು ಕೊಡಲಿ ಎಂದು ಹೇಳಿ. ನಾವೆಲ್ಲರೂ ಅವರ ದುಃಖದಲ್ಲಿ ಭಾಗಿಯಾಗೋಣ ಮತ್ತು ಅವರ ಕುಟುಂಬವರ್ಗದವರಿಗೆ ಭಗವಂತನು ಇನ್ನೂ ಹೆಚ್ಚಿನ ಶಕ್ತಿಯನ್ನು ಕೊಡಲಿ ಎಂದು ಪಾರ್ಥಿಸುತ್ತೇನೆ.

ಅದೇ ತರಹ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಹಿರಿಯ ರಾಜಕಾರಣಿಗಳಾಗಿದ್ದರು. ನನಗೆ ಕಳೆದ ೧೦ ವರ್ಷಗಳಿಂದ ಅವರ ಪರಿಚಯವಿತ್ತು. ಆ ನಂತರ ಮೊದಲು ಅವರ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಳ್ಳುತ್ತಿದ್ದೆ. ಆಷ್ಟೇ ಹೊರತು ಅವರಿಗೂ ನನಗೂ ನೇರವಾದ ಸಂಪರ್ಕವಿರಲಿಲ್ಲ. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಅವರು ಹಳೆಯ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ೧೯೩೭ ರಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆ ಆದಾಗ ಅದರ ಸ್ಥಾಪಕ ಸದಸ್ಯರಾಗಿದ್ದರು ಹಾಗೂ ಅದರ ಅಧ್ಯಕ್ಷರಾಗಿದ್ದರು. ದಕ್ಷತೆಗೆ ಅವರು ಬಹಳ ಹೆಸರಾದಂಥ ವ್ಯಕ್ತಿಯಾಗಿದ್ದರು. ಅವರು ಮೈಸೂರು ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದರು. ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿ ಬಹಳ ದಕ್ಷತೆಯಿಂದ ಕೆಲಸ ನಿರ್ವಹಿಸಿದಂಥ ವ್ಯಕ್ತಿಯಾಗಿದ್ದರು. ಆನಂತರ ಅವರು ಲೋಕಸಭಾ ಸದಸ್ಯರಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದರು. ಇವೊತ್ತು ತಾವೇ ಹೇಳಿದಂತೆ ಏನು ನಾವುಗಳು ಈ ವಿಧಾನಸೌಧದಲ್ಲಿ ಇದ್ದೇವೆ, ಇದನ್ನು ಬಹಳ ಧೈರ್ಯ ಮಾಡಿ ಕಟ್ಟಿದಂಥ ವ್ಯಕ್ತಿ ಇವರು. ಆಗ ಈ ವಿಧಾನಸೌಧ ಕಟ್ಟಬೇಕಾದರೆ ಸಾಕಷ್ಟು ಟೀಕೆಗಳು ಬಂದವು: ಆದರೂ ಅವರು ಯಾವುದೇ ತರಹದ ಟೀಕೆಗಳಿಗೆ ಅವರು ಹೆದರದೆ ಈ ವಿಧಾನಸೌಧವನ್ನು ಕಟ್ಟಿಯೇ ಕಟ್ಟುತ್ತೇನೆಂದು ದೃಢನಿರ್ಧಾರ ಮಾಡಿ ಈ ಒಂದು ಕಟ್ಟಡವನ್ನು ಅವರು ಕಟ್ಟಿದ್ದಕ್ಕೆ ಇವೊತ್ತು ಈ ಒಂದು ಕಟ್ಟಡ ಬಹುಶಃ ನಮ್ಮ ರಾಜ್ಯದಲ್ಲಿಯೇ ಅಲ್ಲ, ನಮ್ಮ ರಾಷ್ಟ್ರದಲ್ಲಿಯೇ ಅಲ್ಲ. ಇಡೀ ವಿಶ್ವದಲ್ಲಿಯೇ ಒಳ್ಳೆಯ ಒಂದು ಹೆಸರನ್ನು ಪಡೆದ ಕಟ್ಟಡವಾಗಿದೆ. ಇಲ್ಲಿಗೆ ಯಾರೇ ವಿದೇಶಿ ಪ್ರವಾಸಿಗಳು ಬರಲಿ, ಯಾರೇ ವಿಶೇಷ ಅತಿಥಿಗಳು ಬರಲಿ, ಪರರಾಷ್ಟ್ರಗಳಿಂದ ಬಂದವರೆಲ್ಲಾ ಈ ವಿಧಾನಸೌಧದ ಕಟ್ಟಡದ ನಿರ್ಮಾಣದ ವೈಶಿಷ್ಟ್ಯವನ್ನು ಹಾಗೂ ಇದರ ಪ್ರತಿಯೊಂದು ಭಾಗಗಳಲ್ಲಿ ಇರುವಂತಹ ಕೆತ್ತನೆ ಕೆಲಸಗಳನ್ನು ನೋಡಿ ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಆಗ ಬಹುಶಃ ಇದನ್ನು ಒಂದು ಕೋಟಿ ಎಪ್ಪತ್ತು ಇಲ್ಲವೇ ಎಂಭತ್ತು ಲಕ್ಷ ರೂ. ಗಳ ಮೆಚ್ಚಿದಲ್ಲಿ ಇದನ್ನು ಕಟ್ಟಲಾಯಿತು. ಆ ಸಮಯದಲ್ಲಿ ಇದನ್ನು ಕಟ್ಟದೇ ಹೋಗಿದ್ದರೆ ಈಗ ಈ ತರಹದ ಕಟ್ಟಡವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿತ್ತೋ ಅಥವಾ ಇಲ್ಲವೊ ಹೇಳುವುದಕ್ಕೆ ಬರುವುದಿಲ್ಲ ಮತ್ತು ಈ ಕಟ್ಟಡ ಇಲ್ಲಿ ಕಟ್ಟದಿದ್ದರೆ ಬೆಂಗಳೂರು ಕರ್ನಾಟಕ ರಾಜ್ಯದ ರಾಜ್ಯಧಾನಿಯಾಗುತಿತ್ತೋ ಅಥವಾ ಇಲ್ಲವೋ ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ, ಮೈಸೂರು ರಾಜ್ಯ ಕರ್ನಾಟಕ ರಾಜ್ಯ ಎಂದು ಆದ ಮೇಲೆ ಈ ವಿಧಾನಸೌದ ಇಲ್ಲಿರುವುದರಿಂದಲೇ ಬೆಂಗಳೂರು ರಾಜಧಾನಿಯಾಯಿತು ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ದೇಶಕ್ಕೆ ಸ್ವಾತಂತ್ರ ಬರಬೇಕೆಂದು ಇವರು ಹೋರಾಟ ಮಾಡಿ ಅನೇಕ ಸಲ ಸೆರೆಮನೆ ವಾಸವನ್ನು ಸಹ ಅನುಭವಿಸಿದರು. ಮುಖ್ಯವಾಗಿ ಇವರು ಜಾತ್ಯಾತೀತಕ್ಕೆ ಹೆಸರಾಗಿದ್ದರು. ಇವರು ಯಾವುದೇ ಒಂದು ವರ್ಗದ ನಾಯಕರಾಗಿರಲಿಲ್ಲ. ಯಾವುದೇ ಒಂದು ಜಾತಿಯ ನಾಯಕರಾಗಿರಲಿಲ್ಲ ಅವರು ಎಲ್ಲ ವರ್ಗದವರ ಪ್ರೀತಿಯನ್ನು ಸಂಪಾದನೆ ಮಾಡಿದ್ದರು. ಅವರು ಅನೇಕ ರೀತಿಯಲ್ಲಿ ಖಂಡಿತವಾದಿಯಾಗಿದ್ದರು. ಅವರು ಯಾರಿಗೂ ಹೆದರದೆ ನಡೆದುಕೊಳ್ಳುತ್ತಿದ್ದರು. ಇರತಕ್ಕಂಥ ವಿಚಾರಗಳನ್ನು ಅವರು ಮುಚ್ಚುಮರೆ ಇಲ್ಲದೆ ಹೇಳುತ್ತಿದ್ದರು. ಅವರು ಬಹಳವಾಗಿ ಮೆಚ್ಚಿಕೊಂಡಿದ್ದಂಥ ವ್ಯಕ್ತಿಯೆಂದರೆ ಡಾ. ಸರ್.ಎಂ. ವಿಶ್ವೇಶ್ವರಯ್ಯನವರು. ಇವರಿಗೆ ಅವರ ಮೇಲೆ ಅಪಾರವಾದಂಥ ಗೌರವವಿತ್ತು. ಮತ್ತು ಅವರು ಯಾವ ರೀತಿಯಲ್ಲಿ ಜೀವನವನ್ನು ಸಾಗಿಸಿದರೋ ಅದೇ ಮಾರ್ಗವನ್ನು ಅನೇಕ ಸಂದರ್ಭಗಳಲ್ಲಿ ಅನುಸರಿಸಿ ಜನತೆಗೂ ಅದನ್ನು

ಹೇಳುತ್ತಿದ್ದರು. ಬಹುಶಃ ನಮ್ಮ ರಾಜ್ಯ ಕರ್ನಾಟಕವಾಗಲು ಅವರು ತಮ್ಮ ಮುಖ್ಯಮಂತ್ರಿಪದವಿಯನ್ನು ತ್ಯಜಿಸಬೇಕಾಯಿತು. ಆವೊತ್ತು ಮೈಸೂರು ಕರ್ನಾಟಕವಾಗಬೇಕೋ ಅಥವಾ ಬೇಡವೋ ಎಂಬ ವಿಷಯ ಬಂದಾಗ, ಕರ್ನಾಟಕವಾಗಬೇಕೆಂದು ಹೇಳುವಂತಹ ದೃಢ ನಿಲುವನ್ನು ತೆಗೆದು ಕೊಂಡ ಕೆಲವೇ ವ್ಯಕ್ತಿಗಳಲ್ಲಿ ಶ್ರೀಮಾನ್ ಹನುಮಂತಯ್ಯನವರೂ ಸಹ ಒಬ್ಬರಾಗಿದ್ದರು. ಹಳೆಯ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿ ಅವರು ಇಂತಹ ಒಂದು ದೃಢ ನಿಲುವು ತೆಗೆದುಕೊಂಡ ಕಾರಣಕ್ಕಾಗಿ. ಅವರು ಮುಖ್ಯಮಂತ್ರಿ ಸ್ಥಾನವನ್ನು, ಇದು ಕರ್ನಾಟಕವಾಗುವುದಕ್ಕೆ ಕೇವಲ ಕೆಲವೇ ತಿಂಗಳ ಮೊದಲು ಕಳೆದುಕೊಳ್ಳಬೇಕಾಯಿತು. ಆದರೂ ಅವರು ಅದರಿಂದ ಯಾವುದೇ ರೀತಿಯ ಧೈರ್ಯಗೆಡದೆ ತಮ್ಮ ಒಂದು ನಿರ್ಧಾರವನ್ನು ಎಲ್ಲ ಕಡೆಗೂ ಹೋಗಿ ತಿಳಿಸಿದರು. ಅವರು ಒಳ್ಳೆಯ ಒಂದು ವ್ಯಕ್ತಿತ್ವಕ್ಕೆ ಹೆಸರು ಪಡೆದಂಥ ವ್ಯಕ್ತಿಯಾಗಿದ್ದರು. ಅವರು ಕೇಂದ್ರದಲ್ಲಿ ಕಾನೂನು ಮಂತ್ರಿಯಾಗಿದ್ದರು, ರೈಲ್ವೇ ಮಂತ್ರಿ ಯಾಗಿದ್ದರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದರು. ಕೇಂದ್ರ ಸರ್ಕಾರದವರು ಆಡಳಿತ ಸುಧಾರಣಾ ಸಮಿತಿಯನ್ನು ರಚನೆ ಮಾಡಿದಾಗ ಇವರು ಅದರ ಸದಸ್ಯರಾಗಿ ಹಾಗೂ ಅದರ ಅಧ್ಯಕ್ಷರಾಗಿ ಬಹಳ ದಕ್ಷತೆಯಿಂದ ಕೆಲಸ ಮಾಡಿದರು. ಇಡೀ ರಾಷ್ಟ್ರದಲ್ಲಿ ಆಡಳಿತ ಪದ್ಧತಿ ಯಾವ ರೀತಿ ಇರಬೇಕೆಂಬುದನ್ನು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ನಾನು ಮುಖ್ಯಮಂತ್ರಿಯಾದ ಮೇಲೆ ನನ್ನ ಸಂಪರ್ಕ ಅವರ ಜೊತೆಯಲ್ಲಿ ಜಾಸ್ತಿಯಾಯಿತು. ನಾವುಗಳು ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಅವರು ನನಗೆ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಮತ್ತು ಅವರ ಜೊತೆಯಲ್ಲಿ ನಾನು ಚರ್ಚೆ ಮಾಡುವಾಗಲೆಲ್ಲಾ ಅವರು ನನಗೆ ಏನು ಹೇಳುತ್ತಿದ್ದರೆಂದರೆ. ಈ ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪಕ್ಕೆ ಅವಕಾಶ ಕೊಡಬಾರದು, ಅಧಿಕಾರ ಬರುತ್ತದೆ, ಹೋಗುತ್ತದೆ, ಆದರೆ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನಾವು ಮಾಡಬಾರದ್ದನ್ನು ಮಾಡುವುದಕ್ಕೆ ಹೋದರೆ, ಈ ರಾಜ್ಯಕ್ಕೆ ಬಹಳ ದೊಡ್ಡ ಅನ್ಯಾಯವನ್ನು ಮಾಡಿದಂತೆ ಆಗುತ್ತದೆ, ಆದ್ದರಿಂದ ಆಡಳಿತದಲ್ಲಿ ಬಿಗಿ ನೀತಿಯನ್ನು ಅನುಸರಿಸಬೇಕು ಮತ್ತು ಅಭಿವೃದ್ಧಿ ಕಾರ್ಯಗಳ ಬಗ್ಗೆ, ಹೆಚ್ಚಿನ ಉದಾರತೆಯಿಂದ ಕೆಲಸ ಮಾಡಬೇಕು, ಹೀಗೆ ಕೆಲಸ ಮಾಡಿದ್ದೇ ಆದರೆ ಬಹುಶಃ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಒಳ್ಳೆಯದಾಗುತ್ತದೆಂದು ಅವರು ನನಗೆ ಪದೇಪದೇ ಹೇಳುತ್ತಿದ್ದರು. ಮತ್ತು ಅನೇಕ ಉದಾಹರಣೆಗಳನ್ನು ಕೊಟ್ಟು ಇದನ್ನು ನನಗೆ ಅವರು ಹೇಳುತ್ತಿದ್ದರು. ಇವನ್ನೆಲ್ಲಾ ಮನಗಂಡು ಅವರು ಈ ರಾಷ್ಟ್ರಕ್ಕೆ ಹಾಗೂ ಈ ರಾಜ್ಯಕ್ಕೆ ಸಲ್ಲಿಸಿದಂಥ ಸೇವೆ ಹಾಗೂ ಈ ಭವ್ಯ ಕಟ್ಟಡವನ್ನು ಅವರು ಬಹಳ ಆಸಕ್ತಿಯಿಂದ ಕಟ್ಟಿಸಿದ್ದರಿಂದ ಅವರ ಒಂದು ಜ್ಞಾಪಕಾರ್ಥವಾಗಿ ಅವರ ಒಂದು ವಿಗ್ರಹವನ್ನು ಅಂದರೆ ಅವರ ಒಂದು ಸ್ವಾಭಾವವನ್ನು ವಿಧಾನಸೌಧದ ಮುಂದೆ ಇಡಬೇಕೆಂದು ತೀರ್ಮಾನ ಮಾಡಿ, ಅವರ ಅನುಮತಿಗಾಗಿ ಒಂದು ಕಾಗದ ಬರೆದೆ. ನನ್ನ ಕಾಗದಕ್ಕೆ ಅವರು ೪ ಅಕ್ಷರಗಳಲ್ಲಿ ಉತ್ತರ ಬರೆದರು. ಅದೇನೆಂದರೆ, "ಬಹುಶಃ ನನ್ನ ಜೀವಮಾನದಲ್ಲಿಯೇ ಇಂತಹ ವಿಷಯ ಕೇಳಿರಲಿಲ್ಲ. ಇದು ನನಗೆ ಸುದಿನ. ಏಕೆಂದರೆ, ಇಲ್ಲಿಯವರೆಗೆ ಯಾರೂ ಯೋಚನೆ ಮಾಡದೆ ಇದ್ದಂಥ ವಿಷಯದ ಬಗ್ಗೆ ನಿಮ್ಮ ಸರ್ಕಾರ ಒಂದು ತೀರ್ಮಾನ ಕೈಕೊಂಡಿದೆ. ಇದರಿಂದ ನನಗೆ ವೈಯಕ್ತಿಕವಾಗಿ ಹೆಮ್ಮೆ ಇಲ್ಲದೆ ಹೋದರೂ ಸಹ, ಒಳ್ಳೆಯ ತೀರ್ಮಾನ ಮಾಡಿದಂಥ ಈ ಸರ್ಕಾರದ ಒಂದು ನಿರ್ಧಾರವನ್ನು ಮುಂದಿನ ಪೀಳಿಗೆ ಜ್ಞಾಪಿಸಿಕೊಳ್ಳುತ್ತದೆ" ಎಂಬುದಾಗಿ ಅವರು ಇದನ್ನು ಬಹಳ ಸಂತೋಷದಿಂದ ಒಪ್ಪಿದರು. ಅನೇಕ ವಿಷಯಗಳಲ್ಲಿ ಅವರು ನನಗೆ ತಮ್ಮ ಒಂದು ಹಿರಿಯ ಅನುಭವಗಳನ್ನು ಹೇಳುತ್ತಿದ್ದರು. ಒಟ್ಟಿನಲ್ಲಿ ಅವರು ನನಗೆ ಬಹಳ ಸಹಕಾರಿಯಾಗಿದ್ದರು. ಇಂತಹವರು ತೀರಿಕೊಂಡಿದ್ದು ನಿಜವಾಗಿಯೂ ನಮ್ಮ ರಾಜ್ಯಕ್ಕೆ ಹಾಗೂ ನಮ್ಮ ರಾಷ್ಟ್ರಕ್ಕೆ ತುಂಬಾ ನಷ್ಟವಾಗಿದೆ. ದಕ್ಷ ಹಾಗೂ ಅನುಭವ ಪಡೆದ ಒಬ್ಬ ದೊಡ್ಡ ವ್ಯಕ್ತಿಯನ್ನು ನಾವು ಕಳೆದುಕೊಂಡಂತೆ ಆಗಿದೆ. ನಾವು ಅವರನ್ನು ಎಷ್ಟು ನೆನೆಸಿಕೊಂಡರೂ ಸಾಲದು. ಅವರ ವ್ಯಕ್ತಿತ್ವಕ್ಕೆ ತಕ್ಕಂತೆ ಅವರಿಗೆ ಸರ್ಕಾರ ಏನು ಗೌರವವನ್ನು ಕೊಡಬೇಕೋ ಅದನ್ನು ಕೊಡುತ್ತದೆ. ಅದರ ಜೊತೆಗೆ ಅವರ ಕುಟುಂಬಕ್ಕೆ ಏನು ದುಃಖ ಆಗಿದೆ ಅದರಲ್ಲಿ ನಾವೂ ಸಹ ಪಾಲುದಾರರಾಗಿ ಆ ದುಃಖವನ್ನು ತಡೆದುಕೊಳ್ಳುವುದಕ್ಕೆ ಭಗವಂತನು ಸ್ಥೈರ್ಯಧೈರ್ಯಗಳನ್ನು ಕೊಡಲಿ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ನಾನು— ಈ ಸದನದಲ್ಲಿ ಪ್ರಾರ್ಥಿಸುತ್ತೇನೆ.

ಅದೇ ಪ್ರಕಾರ ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು ಯುವಕರಾಗಿದ್ದಾಗ ಬಹಳ ಕ್ರಾಂತಿಕಾರಕವಾದ ಮಾರ್ಗವನ್ನು ಅನುಸರಿಸಿ, ಸತ್ಯಾಗ್ರಹದಲ್ಲಿ ಭಾಗವಹಿಸಿ, ವಿದ್ಯಾರ್ಥಿ ನಾಯಕರಾಗಿ, ಯುವಜನ ನಾಯಕರಾಗಿ ಅನೇಕಸಾರಿ ಜೈಲುವಾಸವನ್ನು ಅನುಭವಿಸಿದ್ದಾರೆ. ಅದೇರೀತಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ

ಸಹ ಅವರು ಭಾಗವಹಿಸಿ—ಈ ದೇಶವನ್ನು ಬಿಟ್ಟು ಪರದೇಶ ಸೇರಿ ಅಲ್ಲೂ ಕೂಡ ಆ ಚಳುವಳಿಯನ್ನು ಅವರು ಏರ್ಪಾಡು ಮಾಡುತ್ತಿದ್ದರು. ಅವರು ಬಹಳ ಚಿಕ್ಕವಯಸ್ಸಿನಲ್ಲೇ ಅಂದರೆ ಕೇವಲ ೨೬ನೇ ವರ್ಷದಲ್ಲೇ ಮೈಸೂರಿನ ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾಗಿ ಅನಂತರ ಲೋಕಸಭೆಗೂ ಆಯ್ಕೆಯಾಗಿದ್ದರು ೧೯೫೨ರಲ್ಲಿ ಲೋಕಸಭೆಗೆ ಆಯ್ಕೆಯಾಗಿ ದಿವಂಗತ ಪಂಡಿತ್ ಜವಹರಲಾಲ್ ನೆಹರೂರವರ ಮಂತ್ರಿ ಮಂಡಲದಲ್ಲಿ ಕೃಷಿ ಮತ್ತು ಆಹಾರಖಾತೆಯ ಮಾನ್ಯ ಮಂತ್ರಿಗಳಾಗಿ ಅನೇಕವರ್ಷಗಳ ಕಾಲ ಕೆಲಸಮಾಡಿದ್ದರು. ನಮ್ಮ ರಾಜ್ಯದಲ್ಲಿಯೂ ಕೂಡ ಅವರು ವಿಧಾನಪರಿಷತ್ತಿನ ಸದಸ್ಯರಾಗಿ, ರಾಜ್ಯದ ರೆವಿನ್ಯೂ ಮಂತ್ರಿಗಳಾಗಿ ೫ ವರ್ಷಗಳ ಕಾಲ ಕೆಲಸಮಾಡಿದ್ದರು. ಪುನಃ ಅವರು ಪಾರ್ಲಿಮೆಂಟಿಗೆ ಆಯ್ಕೆಯಾಗಿ ಹೋಗಿದ್ದರು. ಕಳೆದಸಾರಿ ಅಂದರೆ ೧೯೬೧ರಲ್ಲಿ ಮಾತ್ರ ಅವರು ಲೋಕಸಭೆಗೆ ಹೋಗುವುದಕ್ಕೆ ಆಗಲಿಲ್ಲ. ಲೋಕಸಭಾ ಸದಸ್ಯರಾಗಿ ಅಲ್ಲಿ ಮತ್ತು ಈ ರಾಜ್ಯದಲ್ಲಿ ಬಹಳ ಸೇವೆಸಲ್ಲಿಸಿದಂತಹವರು ಮತ್ತು ಅವರು ಬಹಳ ಮುಖ್ಯವಾಗಿ ಯುವಕರಿಗೆ ಬಹಳ ಮಾರ್ಗದರ್ಶನವನ್ನು ನೀಡಿದಂತ ವ್ಯಕ್ತಿ. ಅವರು ೧೦-೮-೧೯೬೦ ರಂದು ನಿಧನರಾದರು. ಆ ಒಂದು ದುಃಖವನ್ನು ತಡೆದುಕೊಳ್ಳುವುದಕ್ಕೆ ಅವರ ಕುಟುಂಬವರ್ಗದವರಿಗೆ ಭಗವಂತನು ಧೈರ್ಯವನ್ನು ಕೊಡಲಿ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ನಾವು ಕೋರುತ್ತೇವೆ.

ಅದೇ ಪ್ರಕಾರವಾಗಿ ಶ್ರೀಮಾನ್ ರಾಚಯ್ಯನವರು ಶ್ರೀಮಾನ್ ಪಾಟೀಲ್‌ರವರು, ಶ್ರೀಮಾನ್ ವೆಂಕಟರಾಮ್‌ರವರು, ಶ್ರೀಮಾನ್ ಕೆ.ಹೆಚ್. ತೇಜ್‌ಸಿಂಗ್ ರಾತೆ ರವರು—ಇವರೆಲ್ಲರೂ ನಮ್ಮನ್ನು ತ್ಯಜಿಸಿ ಹೋಗಿದ್ದಾರೆ. ಇವತ್ತು ನಾವು ಅವರಿಗೆ ಗೌರವವನ್ನು ಸಲ್ಲಿಸಬೇಕಾದರೆ, ಅವರ ಆತ್ಮಕ್ಕೆ ಶಾಂತಿ ಸಿಕ್ಕಬೇಕಾದರೆ, ಅವರು ನಮಗೆ ಏನೊಂದು ಸೇವಾ ಮನೋಭಾವನೆಯನ್ನು ಬಿಟ್ಟು ಹೋಗಿದ್ದಾರೆ ಅದನ್ನು ಅನುಸರಿಸಿ ಈ ದೇಶವನ್ನು ಕಟ್ಟುವುದರಲ್ಲಿ, ಉತ್ತಮವಾದ ದಕ್ಷ ಆಡಳಿತವನ್ನು ಕೊಡುವುದರಲ್ಲಿ, ಶಿಸ್ತಿನ ಆಡಳಿತ ನೀಡುವುದರಲ್ಲಿ ನಾವು ಒಳ್ಳೆಯ ಕೆಲಸವನ್ನು ಮಾಡಿದ್ದೇ ಆದರೆ ಅವರ ಆತ್ಮಕ್ಕೆ ಶಾಂತಿ ಸಿಕ್ಕುತ್ತದೆ ಮತ್ತು ಅವರು ತ್ಯಾಗ ಪಡಾಡಿ ತಂದು ಕೊಟ್ಟಂಥ ಸ್ವಾತಂತ್ರ್ಯಕ್ಕೂ ಬೆಲೆ ಬರುತ್ತದೆ. ಇಷ್ಟು ಮಾತುಗಳನ್ನು ಹೇಳಿ, ಇವತ್ತು ಈ ಸದನ ಅತ್ಯಂತ ವಿಷಾದದಿಂದ ಅತ್ಯಂತ ದುಃಖದಿಂದ ಅವರೆಲ್ಲರ ನಿಧನಕ್ಕೆ ಸಂತಾಪವನ್ನು ವ್ಯಕ್ತ ಮಾಡುತ್ತದೆ, ಅಲ್ಲದೇ ಅವರೆಲ್ಲರ ಕುಟುಂಬವರ್ಗಕ್ಕೆ ಭಗವಂತನು ಎಲ್ಲಾ ರೀತಿಯ ಧೈರ್ಯವನ್ನು ನೀಡಲಿ ಎಂದು ಪಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಾವು ಈಗ ತಾನೇ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಒಂದು ಸಂತಾಪ ಸೂಚಕ ನಿರ್ಣಯವನ್ನು ಪಾಗೂ ತಾವು ಈ ಸಂದರ್ಭದಲ್ಲಿ ಹೇಳಿದಂಥ ಮಾತುಗಳನ್ನು ನಾನು ಪೂರ್ಣವಾಗಿ ಬೆಂಬಲಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕಾಗಿ ತಮ್ಮ ಅಪ್ಪಣೆ ಪಡೆದು ಇಲ್ಲಿ ನಿಂತಿದ್ದೇನೆ. ಪೊದಲನೆಯದಾಗಿ ಶ್ರೀಮತಿ ಸುಮತಿ ಬಿ. ಮಾಡಿಮನ್‌ರವರು ನಮ್ಮ ಈ ಸದನದ ಸದಸ್ಯರಾಗಿ, ಆದರ ಜೊತೆಗೆ ಈ ಸದನದ ಡೆಪ್ಯುಟಿ ಸ್ಪೀಕರ್ ಆಗಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದರಂಥ ವಿಚಾರ ಎಲ್ಲರಿಗೂ ಗೊತ್ತಿದೆ. ನಮ್ಮ ಶಾಸಕರ ಪೈಕಿ ತುಂಬಾ ನಿಷ್ಪಾವಂತರಾಗಿದ್ದರೆಂ ಹಾಗೂ ಶಾಸಕರಾಗಿ ಅವರ ಕರ್ತವ್ಯವನ್ನು ಯಾವ ರೀತಿ ಮಾಡಜೇಕು ಎನ್ನುವುದನ್ನು ಬಹಳ ಚೆನ್ನಾಗಿ ಅರಿತಂತಹವರಾಗಿದ್ದರು. ಅವರು ಅವರ ಕ್ಷೇತ್ರದಲ್ಲಿ ಕೂಡ ಬಹಳ ಜನಪ್ರಿಯರಾಗಿದ್ದರು. ಕಾರಣ ಅವರು ಎಂದಿಗೂ ಬೆಂಗಳೂರಿನಲ್ಲಿ ಕುಳಿತು ರಾಜಕೀಯ ನಡೆಸಿದವರಲ್ಲ ತಮ್ಮ ಸ್ವಂತಕ್ಕಾಗಿ ಯಾವ ಒಂದು ಆಸೆಯನ್ನಾಗಲೀ ಅವರು ಇಟ್ಟುಕೊಂಡಿರಲಿಲ್ಲ. ಪದವಿಗಾಗಲೀ ಅಥವಾ ಮತ್ತೊಂದಕ್ಕಾಗಲೀ ಪೀಡಾಡಿಕೊಂಡಿದ್ದವರಲ್ಲ. ಅವರು ಯಾವತ್ತೂ ಇನ್ನೊಬ್ಬರ ಹತ್ತಿರ ಶಿಫಾರಸು ಪಡೆಯುವುದಕ್ಕೆ ಹೋಗಲಿಲ್ಲ. ತಮ್ಮ ಕ್ಷೇತ್ರ ವಾಯಿತು, ತಮ್ಮ ಕೆಲಸವಾಯಿತು—ಇಷ್ಟರಲ್ಲಿ ಅವರು ಇದ್ದರು. ಈ ಕಾರಣದಿಂದ ನನ್ನ ದೃಷ್ಟಿಯಲ್ಲಿ ಅವರು ನಮ್ಮೆಲ್ಲರ ಮತ್ತು ಇಡೀ ಸದನ ಮೆಚ್ಚುವಂಥ ರೀತಿಯಲ್ಲಿ ಇಲ್ಲಿ ಡೆಪ್ಯುಟಿ ಸ್ಪೀಕರ್ ಆಗಿ ಕೆಲಸ ಮಾಡಿದುದರ ಜೊತೆಗೆ ಶಾಸಕರಾಗಿ ಕೂಡ ಅವರ ಕ್ಷೇತ್ರದಲ್ಲಿ ಜನ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿ ಜನಪ್ರಿಯರಾಗಿದ್ದರು. ಆದ್ದರಿಂದ ಅವರು ಶ್ರೇಷ್ಠ ಶಾಸಕರ ಪಂಕ್ತಿಗೆ ಸೇರಿದವರಲ್ಲಿ ಒಬ್ಬರು ಎಂದೂ ನಾನು ತೀರ್ಮಾನಿಸಿಕೊಂಡಿದ್ದೇನೆ.

ಇನ್ನು ಈ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ನಮ್ಮನ್ನು ಅಗಲಿದ್ದಾರೆ. ಈ ವಿಚಾರದಲ್ಲಿ ನನಗೆ ವೈಯಕ್ತಿಕವಾಗಿ ಹೆಚ್ಚಿನ ನೋವು ಪಾಗೂ ದುಃಖ

ಉಂಟಾಗಿದೆ. ಕಾರಣ ಅವರು ಮತ್ತು ನಾನು ೧೯೮೯-೪೨ನೇ ಇಸವಿಯಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಇದ್ದಂತಹ ಪ್ರಜಾ ಪ್ರತಿನಿಧಿ ಸಭೆಗೆ ಒಟ್ಟಿಗೆ ಸದಸ್ಯರಾಗಿ ಚುನಾಯಿಸಿ ಬಂದಿದ್ದೆವು. ಆ ಕಾಲದಲ್ಲಿ ಅವರು ನಮ್ಮ ಕಾಂಗ್ರೆಸ್ ಪಕ್ಷದ ಡೆಪ್ಯುಟಿ ಲೀಡರ್ ಆಗಿ ಕೆಲಸ ಮಾಡುತ್ತಿದ್ದರು. ಶ್ರೀಮಾನ್ ಕೆ.ಸಿ. ರೆಡ್ಡಿಯವರು ಲೀಡರ್ ಆಗಿ ಕೆಲಸ ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಇದ್ದಂತಹ ಎಲ್ಲಾ ಕಾಂಗ್ರೆಸ್ ಮುಖಂಡರಲ್ಲಿ ಎಲ್ಲದರಲ್ಲೂ ಮುಂದಾಳತ್ವವನ್ನು ವಹಿಸಿದ್ದಂಥ ವ್ಯಕ್ತಿಯಾಗಿದ್ದರು. ಆಗ ಅವರಿಗೆ ವಯಸ್ಸು ಚಿಕ್ಕದಾಗಿತ್ತು, ಆ ಕಾಲಕ್ಕೆ ನಾವೆಲ್ಲರೂ ಯುವಕರಾಗಿದ್ದೆವು, ನಮಗೆ ಆಗ ಯುವಕರಾಗಿದ್ದ ಶ್ರೀಮಾನ್ ಹನುಮಂತಯ್ಯನವರೆಂದರೆ ಬಹಳ ಅಭಿಮಾನ ಹಾಗೂ ಮೆಚ್ಚಿಗೆ ಇತ್ತು. ಯುವಕರಿಗೆ ಮುಂದಾಳುತನ ಕೊಡತಕ್ಕಂಥ ದೊಡ್ಡ ಮುಖಂಡರು ಎಂದು ನಾವು ಅವರನ್ನು ಭಾವಿಸಿಕೊಂಡು ಅವರ ಸಂಗಡ ಕೆಲಸ ಮಾಡುತ್ತಿದ್ದೆವು. ಈಗ ತಾನೇ ಮಾತನಾಡಿದಂಥ ಮಾನ್ಯ ಮುಖ್ಯ ಮಂತ್ರಿಯವರು ಹಿಂದೆ ನಡೆದಂಥ ಒಂದು ಚಳುವಳಿಯಲ್ಲಿ ಅವರು ಭಾಗವಹಿಸಿ ಜೈಲಿಗೆ ಹೋಗಿದ್ದಂಥ ವಿಚಾರವನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಪುನರುಚ್ಚರಿಸತಕ್ಕಂಥ ಅಗತ್ಯ ಇಲ್ಲ. ಆದರೆ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಆಗ ನಮ್ಮ ರಾಜ್ಯದಲ್ಲಿ ರಾಜರ ಆಳ್ವಿಕೆ ಇತ್ತು. ಆಗಿನ ಕಾಲದಲ್ಲಿ ಯಾವ ಕಾಂಗ್ರೆಸ್ ಮುಖಂಡನು ರಾಜರ ಬಗ್ಗೆ ಅಥವಾ ರಾಜ್ಯದ ಬಗ್ಗೆ ಮಾತನಾಡಿದರೆ ಇಂಡಿಯನ್ ಪೀನಲ್ ಕೋಡ್‌ನಲ್ಲಿರತಕ್ಕಂಥ ತಕ್ಷೀರು ಅವರ ಮೇಲೆ ಹೋಗುತ್ತಾ ಇತ್ತು, ಅದಕ್ಕೆ ಒಳಗಾಗಿ ಯಾವೊಬ್ಬ ಮುಖಂಡನೂ ಜೈಲಿಗೆ ಹೋಗಬೇಕಾಗುತ್ತಿತ್ತು. ಅದರಂತೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಒಮ್ಮೆ ಅದಕ್ಕೆ ಒಳಗಾಗಿ ಜೈಲುವಾಸ ಅನುಭವಿಸಬೇಕಾಗಿ ಬಂತು. ಅದ್ಯಾವುದಕ್ಕೂ ಅವರು ಹೆದರದೆ ಮುಂದೆ ಅವರು ಆಗಿನ ಕಾಲದಲ್ಲಿ ಯಾವ ಒಂದು ಬದಲಾವಣೆ ಆಗಬೇಕೆಂದು ಚಳುವಳಿ ನಡೆಯುತ್ತಿತ್ತೋ ಆ ಚಳುವಳಿಯಲ್ಲಿ ಭಾಗವಹಿಸಿ ಎಲ್ಲರಿಗಿಂತ ಹೆಚ್ಚಿನ ಮುಖಂಡತ್ವವನ್ನು ವಹಿಸಿ ಬಹಿರಂಗ ಸಭೆಗಳಲ್ಲಿ ಭಾಷಣ ಮಾಡಿ ಜನರನ್ನು ಒಲಿಸಿಕೊಳ್ಳುತ್ತಿದ್ದರು. ಅದೇ ರೀತಿಯಾಗಿ ಆಗಿನ ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ಕೂಡ ಮುಂದಾಳತ್ವವನ್ನು ವಹಿಸುತ್ತಿದ್ದರು. ಅವರು ೧೯೪೨ನೇ ಇಸವಿಯಲ್ಲಿ ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದದ್ದು ತಮಗೆಲ್ಲಾ ಗೊತ್ತಿದೆ. ನನ್ನ ಒಂದು ಅದೃಷ್ಟ ಏನೆಂದರೆ ಅವರು ಎಂದಿನಿಂದ ನಾಯಕರಾದರೋ ಅಂದಿನಿಂದ ನಾನು ಅವರ ಜೊತೆಯಲ್ಲಿ ಶಾಸಕನಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಅವರು ಪಾರ್ಲಿಮೆಂಟಿಗೆ ಹೋದಾಗ ನಾನು ಇಲ್ಲೇ ಉಳಿದುಕೊಂಡೆ ಅಷ್ಟೆ.

೧-೩೦ ಪಿ.ಎಂ.

ಅವರು ಮುಖ್ಯ ಮಂತ್ರಿಗಳಾಗಿದ್ದಾಗ ವಿಧಾನಸೌಧ ಕಟ್ಟುವ ಸಂದರ್ಭದಲ್ಲಿ ನಡೆದಂಥ ಪ್ರಸಂಗವನ್ನು ನಾವು ನೆನಪಿಕೊಳ್ಳಬೇಕಾದ್ದಿದೆ. ಅವರು ಪ್ರತಿನಿತ್ಯ ಬಂದು ಈ ಕಟ್ಟಡದ ಬೆಳವಣಿಗೆ ಮತ್ತು ಕಾರ್ಯಕ್ರಮವನ್ನು ನೋಡಿ, ವಿಷಯಗಳನ್ನು ಆಗಿಂದಾಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಚರ್ಚೆ ಮಾಡುತ್ತಿದ್ದರು. ಹಾಗೂ ಇದಕ್ಕೆ ಸಂಬಂಧಪಟ್ಟ ಆರ್ಕಿಟೆಕ್ಟ್‌ರ್ ಬಗ್ಗೆ ಕೂಡ ಹೆಚ್ಚಾಗಿ ಅವರ ಒಂದು ಕಲ್ಪನೆ ಏನಿತ್ತೋ ಆ ಕಲ್ಪನೆಯನ್ನೇ ಅವಲಂಬಿಸಿದಂಥ ಆರ್ಕಿಟೆಕ್ಚರ್ ಈ ಕಟ್ಟಡದಲ್ಲಿದೆ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಆಗ ಅವರು ನಮ್ಮ ಮನಸ್ಸು ಬಹಳ ನೋಯತಕ್ಕಂಥ ಒಂದು ಪ್ರಸಂಗವನ್ನು ಕೂಡ ಎದುರಿಸಬೇಕಾಗಿ ಬಂದಿತ್ತು. ನಮ್ಮಲ್ಲಿ ನಮ್ಮ ಪಕ್ಷದವರೇ ಆಗಿದ್ದಂಥ ಕೆಲವು ಹಿರಿಯ ನಾಯಕರಿಗೆ ಶ್ರೀಮಾನ್ ಹನುಮಂತಯ್ಯನವರು ಈ ವಿಧಾನಸೌಧ ಕಟ್ಟಡ ಕಟ್ಟಿಸಿದರೆ ಅದರ ಕೀರ್ತಿ ಅವರಿಗೆ ಬಂದುಬಿಡುತ್ತದೆ ಎಂಬ ಹೊಟ್ಟೆ ಉರಿ ಬಂದು ಇದನ್ನು ಏನಾದರೂ ಮಾಡಿ ತಪ್ಪಿಸಬೇಕು ಎಂದು ಬಹಳ ಪ್ರಯತ್ನಪಟ್ಟರು. ಆ ಒಂದು ಮಾರ್ಪಿತನದ ಪ್ರಯತ್ನ ಎಲ್ಲಿಯವರೆಗೂ ಹೋಯಿತು ಎಂದರೆ ಒಂದು ದಿವಸ ಅವರು ಕಟ್ಟಡದ ಇನ್ಸ್‌ಪೆಕ್ಷನ್‌ಗೆ ಬಂದಾಗ ಕೆಲವು ದುಷ್ಕರನ್ನು ಪ್ರೇರಪಣೆಮಾಡಿ ಅವರ ಮೇಲೆ ಕೈ ಮಾಡುವಂಥ ಪರಿಸ್ಥಿತಿಯನ್ನೂ ಕೂಡ ಉಂಟು ಮಾಡಿದರು. ಆದರೂ ಅವರು ಮನಗುಂದದೆ ಧೈರ್ಯದಿಂದ ಈ ಕಟ್ಟಡವನ್ನು ಪೂರೈಸಿದರು. ವಿಧಿಲೀಲೆಯೇನೋ, ಅವರು ಕಟ್ಟಡ ಪೂರೈಸಿದರೇ ಹೊರತು ಅವರು ಕಟ್ಟಿಸಿದಂಥ ಈ ಕಟ್ಟಡದಲ್ಲಿ ಒಂದು ದಿವಸ ಕೂಡ ಅಧಿಕಾರ ಪದವಿಯನ್ನು ವಹಿಸಿ ಕೆಲಸ ಮಾಡುವುದಕ್ಕೆ ಅವಕಾಶವಾಗಲಿಲ್ಲ. ಅದಕ್ಕೂ ಕೂಡ ನಮ್ಮಲ್ಲಿದ್ದಂಥ ಒಂದು ಒಳಜಗಳವೇ ಕಾರಣವಾಯಿತು. ಕರ್ನಾಟಕ ರಾಜ್ಯ ಸ್ಥಾಪನೆ ಮಾಡಬೇಕು ಎಂದು ದೊಡ್ಡ ಚಳುವಳಿ ನಡೆಯುತಾ ಇದ್ದಾಗ ನಮ್ಮ ಹಳೇ ಮೈಸೂರಿನಲ್ಲಿ ಅದಕ್ಕೆ ವಿರುದ್ಧವಾದ ಚಳುವಳಿ ಬಹಳ ಪ್ರಬಲ

ವಾಗಿತ್ತು. ಅದು ಬಹಳ ಪ್ರಬಲವಾಗಿತ್ತು ಎಂದು ಹನುಮಂತಯ್ಯನವರಿಗೆ ಗೊತ್ತಿತ್ತು. ಗೊತ್ತಿದ್ದರೂ ಕೂಡ ಈ ಕರ್ನಾಟಕ ರಾಜ್ಯ ದೊಡ್ಡದಾದಂಥ ರಾಜ್ಯವಾಗಬೇಕು ಎಂಬ ಗುರಿಸಾಧನೆಗಾಗಿ ಅವರು ಯಾವುದಕ್ಕೂ ಅಂಜದೆ ಆ ಒಂದು ನಿಲುವನ್ನು ದೃಢವಾಗಿ ತಳೆದರು ಮತ್ತು ಕೆಲಸ ಮಾಡಿದರು. ೧೯೫೬ನೇ ಇಸವಿಯ ನವೆಂಬರ್ ತಿಂಗಳಲ್ಲಿ ಈ ನಮ್ಮ ರಾಜ್ಯ ವಿಸ್ತಾರವಾದಂಥ ಲಿಂಗ್ವಿಸ್ಟಿಕ್ ಪ್ರಾವಿನ್ ಕರ್ನಾಟಕ ರಾಜ್ಯವಾಯಿತು. ಕೇವಲ ೩ ತಿಂಗಳಲ್ಲಿ ಅವರು ಮುಖ್ಯಮಂತ್ರಿ ಸ್ಥಾನದಿಂದ ಬಿಟ್ಟಿದ್ದು, ಅವರು ಬಿಟ್ಟಿದ್ದು ಎಂದು ಹೇಳುವುದಿಲ್ಲ, ಅವರನ್ನು ಉರುಳಿಸಿದರು. ಆದರೂ ಕರ್ನಾಟಕ ರಾಜ್ಯವನ್ನು ಮಾಡಬೇಕು ಎನ್ನುವ ಆಸೆ ಇತ್ತು, ಕರ್ನಾಟಕ ರಾಜ್ಯ ಆಗಬೇಕು ಎಂದು ಕೆಲಸ ಮಾಡುತ್ತಿದ್ದರು. ಇವರನ್ನು ಇಬ್ಬರು ಸೇರಿ ಉರುಳಿಸಿದರು. ಅದು ಎಲ್ಲಿಯವರೆಗೆ ಹೋಯಿತು ಎಂದರೆ ಅವರ ಸಂಗಡ ದಲ್ಲಿ ಕೆಲಸ ಮಾಡುತ್ತಿದ್ದಂಥ ಮಂತ್ರಿಮಂಡಲದ ಮಂತ್ರಿಗಳಲ್ಲಿ ನನಗೆ ಜ್ಞಾಪಕ ಇದ್ದಹಾಗೆ ಇಬ್ಬರೇ ಇಬ್ಬರು ಅವರ ಜೊತೆಯಲ್ಲಿ ಉಳಿದರು, ಬಾಕಿಯವರೆಲ್ಲಾ ಕೈಕೊಟ್ಟರು. ಕೈಕೊಟ್ಟವರು ಇನ್ನೂ ನಮ್ಮಲ್ಲೂ ಇದ್ದಾರೆ. ಅವರ ಹೆಸರು ಹೇಳುವುದಕ್ಕೆ ಇಷ್ಟವಿಲ್ಲ. ಹಿಂದಿನ ಏಪಸ ನಮ್ಮ ಜೊತೆ ಯಲ್ಲಿದ್ದವರು ಬೆಳಿಗಾಗುವುದರೊಳಗೆ ಬೇರೆ ಕಂಪನಿಗೆ ರವಾನೆಯಾಗಿದ್ದರು. ನಂತರ ಅಲ್ಲಿಂದ ಬಿಟ್ಟರು. ಆಮೇಲೆ ಈ ಕಟ್ಟಿದ ಕಟ್ಟಿಸುವ ವಿಚಾರದಲ್ಲಿ ಹನುಮಂತಯ್ಯನವರ ಮೇಲೆ ಭಾರಿ ಆಕ್ಷೇಪಣೆಗಳನ್ನು ಮಾಡಿದರು. ಬಹಿರಂಗವಾಗಿ, ಶಾಸನ ಸಭೆಯಲ್ಲಿ, ಹೊರಗಡೆ ಎಲ್ಲಾ ಕಡೆ ಆಕ್ಷೇಪಣೆಗಳನ್ನು ಮಾಡಿದರು. ಅವರು ಲಂಚದ ರೂಪದಲ್ಲಿ ದುಡ್ಡನ್ನು ಸಂಪಾದನೆ ಮಾಡಿಬಿಟ್ಟಿದ್ದಾರೆ ಎಂದು ಆಪಾದನೆ ಮಾಡಿದರು. ಆಗ ಅವರು ಎಲ್ಲಾ ಕಾಲಕ್ಕೂ ನಾವೆಲ್ಲರೂ ಅನುಸರಿಸತಕ್ಕಂಥ ಒಂದು ನೀತಿಯನ್ನು ಇಟ್ಟುಹೋದರು. ಅದು ಏನೆಂದರೆ, ತಾವೇನೇ ತಮ್ಮ ಮೇಲೆ ದಾಸ್ ಕಮೀಷನ್ ಎಂಬ ಒಂದು ಕಮೀಷನನ್ನು ನೇಮಕ ಮಾಡಿದರು. ಆ ಕಮೀಷನ್ನಿನ ವರದಿ ಬಂದಾಗ ಅವರ ಮೇಲೆ ಇದ್ದಂಥ ಆಪಾದನೆಗಳು ಆಧಾರ ರಹಿತ ಎಂದು ಸ್ಪಷ್ಟವಾಯಿತು. ಆಗಿನ ಕಾಲದಲ್ಲಿ ಅಂದರೆ ನಮ್ಮ ಹಿಂದಿನ ಮೈಸೂರು ಹೈಕೋರ್ಟಿನಲ್ಲಿದ್ದಂಥ ಕೆಲವು ನ್ಯಾಯಾಧೀಶರು ಇವರನ್ನು ಏನಾದರೂ ಮಾಡಿ ಹತ್ತಿಕ್ಕಬೇಕು, ಏನಾದರೂ ಮಾಡಿ ಯಾವುದಾದರೂ ಆಪವಾದಕ್ಕೆ ಗುರಿ ಮಾಡಬೇಕು ಎಂದು ಮಾಡಿದ ಪ್ರಸಂಗಗಳು ನನ್ನ ಮನಸ್ಸಿನಲ್ಲಿ ಬರುತ್ತಿವೆ, ಜ್ಞಾಪಕಕ್ಕೆ ಬರುತ್ತಿವೆ. ದಿವಂಗತ ಹನುಮಂತಯ್ಯನವರು ಯೂನಿಯನ್ ಮಿನಿಸ್ಟರಾಗಿ ಕೆಲಸ ಮಾಡಿದರು. ಒಂದು ವರ್ಷ ಮಾಡಿದರು ಎಂದು ಕಾಣುತ್ತದೆ. ನನಗೆ ಒಂದು ವರ್ಷವೋ, ೧೦ ತಿಂಗಳೋ ೧೨ ತಿಂಗಳೋ ಜ್ಞಾಪಕವಿಲ್ಲ. ಹತಾತ್ಕಾಗಿ ಅವರನ್ನು ತೆಗೆದದ್ದು ಉಂಟು. ಅದಕ್ಕೆ ಏನು ಕಾರಣ ಎನ್ನುವುದೆಲ್ಲಾ ಈಗ ಅಗತ್ಯವಿಲ್ಲ ಅವರು ಯೂನಿಯನ್ ರೈಲ್ವೆ ಮಿನಿಸ್ಟರಾಗಿ ಕೆಲಸ ಮಾಡುವಾಗ ಕೆಲವೇ ತಿಂಗಳಲ್ಲಿ ಅವರ ಆಡಳಿತ ದಕ್ಷತೆ ಎಷ್ಟು ಎತ್ತರದಲ್ಲಿ ಇತ್ತು ಎನ್ನುವುದನ್ನು ಜಗಜ್ಜಾಹೀರಾಗಿ ಮಾಡಿ ಹೋಗಿದ್ದಾರೆ. ಹನುಮಂತಯ್ಯನವರು ರೈಲ್ವೆ ಮಂತ್ರಿಗಳಾಗಿದ್ದ ಕಾಲದಲ್ಲಿ ರೈಲುಗಳು ಕಾಲಕ್ಕೆ ಸರಿಯಾಗಿ ಎಲ್ಲಾ ಕಡೆ ಓಡಾಡತಕ್ಕ ಒಂದು ವಿಪ್ಲವಾಡಾಯಿತು. ಹಿಂದೆ ಪ್ರತಿ ವರ್ಷವೂ ಕೂಡ ರೈಲ್ವೆ ಬಡ್ಜೆಟ್ ಖೋತಾ ಬಡ್ಜೆಟ್ಟಾಗುತ್ತಿತ್ತು, ಕಳೆದುಕೊಳ್ಳುತ್ತಿತ್ತು. ಇವರ ಕಾಲದಲ್ಲಿ ಮಾತ್ರ ನನಗೆ ಜ್ಞಾಪಕವಿರುವಂತೆ ಸುಮಾರು ೨೨–೨೩ ಕೋಟಿ ರೂಪಾಯಿಗಳ ಲಾಭ ಸಂಪಾದನೆ ಮಾಡಿ ಬಡ್ಜೆಟ್ಟನ್ನು ಮಂಡಿಸಿದರು. ಅವರು ರೈಲ್ವೆ ಮಂತ್ರಿತನ ಬಿಟ್ಟಿಂದೀಚೆಗೆ ನನಗೆ ಜ್ಞಾಪಕವಿರುವ ಹಾಗೆ ರೈಲುಗಳು ಕಾಲಕ್ಕೆ ಸರಿಯಾಗಿ ಹೊರಡುವ ಮತ್ತು ಕಾಲಕ್ಕೆ ಸರಿಯಾಗಿ ಮುಂದಿನ ಡೆಸ್ಟಿನೇಷನ್ ಮುಟ್ಟುವ ಹಾಗೆ ಇದುವರೆಗೆ ಯಾರೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಹನುಮಂತಯ್ಯನವರ ಕಾಲದಿಂದೀಚೆಗೆ ಇಲ್ಲಿಯವರೆಗೆ ಆ ಒಂದು ಕೆಲಸ ಮಾತ್ರ ಯಾರಿಂದಲೂ ಸಾಧ್ಯವಾಗಲಿಲ್ಲ. ಮತ್ತೆ ಅವರಲ್ಲಿ ಒಂದು ಗುಣ ಏನಿತ್ತು ಅಂದರೆ ಅವರು ತುಂಬಾ ದೈವ ಭಕ್ತರು. ಅದಕ್ಕೆ ದೊಡ್ಡ ಸಾಕ್ಷಿ ಯಾಗಿರುವುದು ಕೆಂಗಲ್‌ನಲ್ಲಿ ಹನುಮಂತಯ್ಯನವರು ದೇವಸ್ಥಾನವನ್ನು ಕಟ್ಟಿಸಿರತಕ್ಕಂಥಾದ್ದು ಆದೇ ರೀತಿ ಬೆಂಗಳೂರು ನಗರದಲ್ಲಿ ರಾಮ ಸುಗ್ರೀವರ ದೊಡ್ಡ ಪ್ರತಿಮೆಯನ್ನು ಮಾಡಿಸಿದ್ದಾರೆ. ಹನುಮಂತ ನಗರದಲ್ಲಿ ಅದನ್ನು ನಮ್ಮ ಸ್ನೇಹಿತರು ನೋಡಬಹುದು. ಕೆಲವರು ನೋಡಿದ್ದಾರೋ ಏನೋ ಗೊತ್ತಿಲ್ಲ. ಬಹಳ ಎತ್ತರವಾದ ಸುಗ್ರೀವ ಮತ್ತು ರಾಮ ಒಬ್ಬರನೊಬ್ಬರು ತಬ್ಬಿಕೊಂಡಿರತಕ್ಕಂಥ ಪ್ರತಿಮೆಗಳನ್ನು ಮಾಡಿಸಿದ್ದಾರೆ. ಹೀಗೆ ಅವರಲ್ಲಿ ದೇವರಲ್ಲಿ ತುಂಬ ಭಕ್ತಿ ಇತ್ತು. ಮತ್ತು ನ್ಯಾಯ ಮಾಡುವುದರಲ್ಲಿ ವಿಶ್ವಾಸವಿತ್ತು, ಯಾವುದಕ್ಕೂ ಅಂಜತಕ್ಕಂಥಾವರಲ್ಲ ರಾಜಕೀಯದಲ್ಲಿ ಪ್ರಾಮಾಣಿಕತೆಯನ್ನು ಪೂರ್ಣ ವಾಗಿಟ್ಟುಕೊಂಡಿದ್ದವರು. ಇನ್ನೊಬ್ಬರಿಗೆ ಮೋಸಮಾಡುವಂಥ ಕೆಟ್ಟಭಾವನೆ ಅವರಲ್ಲಿ ಇರಲಿಲ್ಲ. ಹೀಗೆ ಒಬ್ಬ ರಾಜಕಾರಣಿಗೆ ಇರಬೇಕಾದಂಥ ಎಲ್ಲ ಒಳ್ಳೆಯ ಗುಣಗಳು ಆ ವ್ಯಕ್ತಿಯಲ್ಲಿತ್ತು. ಅವರ ಕೊನೇ ಕಾಲದಲ್ಲಿ ರಾಜ್ಯಸಭೆಯ ಮೆಂಬರಾಗಬೇಕು ಎನ್ನುವ ಆಸೆ ಇತ್ತು ಎಂದು ಕಾಣುತ್ತದೆ.

ದುರಾದೃಷ್ಟವಶಾತ್ ಅವರು ರಾಜ್ಯ ಸಭೆಯ ಸದಸ್ಯತ್ವ ದೊರಕಲಿಲ್ಲ. ಅಂಥಾ ಒಬ್ಬ ವ್ಯಕ್ತಿಗೆ ದೊರಕ ಬೇಕಾಗಿತ್ತು. ಆದರೂ ದೊರಕಲಿಲ್ಲ. ಒಟ್ಟಿನಲ್ಲಿ ಅವರು ಇನ್ನು ಕೆಲವಾರು ವರ್ಷಗಳು ನಮ್ಮ ದೇಶದಲ್ಲಿ ಇದ್ದಿದ್ದರೆ ಅಂಥಾ ಅನುಭವಿಗಳ, ಹಿರಿಯ ರಾಜಕಾರಣಿಗಳ ಮಾರ್ಗದರ್ಶನ ಅನೇಕರಿಗೆ ಸಿಗುತ್ತಿತ್ತು. ಅಂಥಾ ಒಂದು ಅವಕಾಶ ನಮಗೆ ಇಲ್ಲದ ಹಾಗಾಯಿತು. ಅವರು ಈ ಪ್ರಪಂಚವನ್ನೇ ಬಿಟ್ಟು ಆಗಲೆ ಹೋಗಿದ್ದಾರೆ.

ಇನ್ನು ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು ಇವರು ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಪ್ರಾರಂಭವಾಗಿತ್ತು. ಆಗಿನ ಕಾಲದಲ್ಲಿ ಹಳೆಯ ಮೈಸೂರಿನಲ್ಲಿ ಶ್ರೀಮಾನ್ ಕೃಷ್ಣಪ್ಪನವರ ಹೆಸರನ್ನು ಕೇಳದೇ ಇರುವವರು ಇಲ್ಲ. ಆಗ ಕೃಷ್ಣಪ್ಪನವರು ಎಂದರೆ ಸರ್ಕಾರಕ್ಕೆ ಮತ್ತು ಪೋಲೀಸಿನವರಿಗೆ ಒಂದು ರೀತಿಯಲ್ಲಿ ಭಯ. ಏತಕ್ಕೆಂದರೆ ಅವರು ಇವತ್ತು ಇಲ್ಲಿ ಎಂದರೆ ನಾಳೆ ಇನ್ನೆಲ್ಲೋ ಇರುತ್ತಿದ್ದರು, ಯಾರಿಗೂ ಗೊತ್ತಾಗುತ್ತಿರಲಿಲ್ಲ. ೧೯೪೨ ನೇ ಇಸ್ವಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಹಳ ಸಾಹಸ ಮಾಡಿದಂಥ ವ್ಯಕ್ತಿ ಇವರು. ನನಗೆ ಜ್ಞಾಪಕವಿದ್ದ ಹಾಗೆ ಅವರು ೧೯೪೫ರಲ್ಲಿ ಪ್ರಜಾಪ್ರತಿನಿಧಿಯ ಸಭೆಯ ಸದಸ್ಯರಾಗಿದ್ದರು. ಮತ್ತೆ ೧೯೫೨ ರಿಂದ ೫೭ ರವರೆಗೆ ಲೋಕ ಸಭೆಯ ಸದಸ್ಯರಾಗಿದ್ದರು ಮತ್ತು ಕೆಲವಾರು ವರ್ಷಗಳ ಕಾಲ ಅವರು ಮಿನಿಸ್ಟರ್ ಆಗಿ ಕೂಡ ಕೆಲಸ ಮಾಡಿದ್ದರು. ಇಲ್ಲಿ ರೆವಿನ್ಯೂ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೆವು. ಅವರು ಮಾಡಿರ ತಕ್ಕ ಒಂದು ಸ್ವತ್ಯಾರ್ಹವಾದ ಕೆಲಸವನ್ನು ನಾವು ಸದಾಕಾಲ ಸ್ಮರಿಸುವಹಾಗೆ ಮಾಡಿ ಹೋಗಿದ್ದಾರೆ ನಮ್ಮ ರಾಜ್ಯದಲ್ಲಿ ಇವತ್ತು ಈ ಒಂದು ಗೋಸಂಪತ್ತನ್ನು ಬೆಳೆಸಿರುವುದೇ. ಆಗಲಿ ಕ್ಷೀರಾಭಿವೃದ್ಧಿ ಕೇಂದ್ರಗಳನ್ನು ಮಾಡಿರುವುದೇ ಆಗಲೀ. ಮತ್ತೆ ಈ ಮಿಶ್ರ ತಳಿ ಅಭಿವೃದ್ಧಿ ಕಾರ್ಯವನ್ನು ಮಾಡಿರುವುದೆ ಆಗಲೀ. ಅಥವಾ ಬೆಂಗಳೂರು ಡೈರಿ ಸ್ಥಾಪನೆಯ ವಿಷಯದಲ್ಲಿಯೇ ಆಗಲೀ, ಶ್ರೀಮಾನ್ ಕೃಷ್ಣಪ್ಪನವರನ್ನು ಯಾವಾಗಲೂ ಜ್ಞಾಪಿಸಿಕೊಳ್ಳಬೇಕಾಗುತ್ತೆ. ತಮಗೆಲ್ಲಾ ಗೊತ್ತಿದ್ದ ಹಾಗೆ ಅವರ ಕಾಲದಲ್ಲಿ ಹರಿಯಾಣ ಪಂಜಾಬ್‌ನಲ್ಲಿ ಸಾವಿರಾರು ದನಗಳು ಕಾಡಿನಲ್ಲಿ ಮೇಯ್ದುಕೊಂಡು ತಿರುಗಾಡಿಕೊಂಡು ಇದ್ದವು. ಈಗಲೂ ಇರಬಹುದು. ಪ್ರಥಮವಾಗಿ ಶ್ರೀಮಾನ್ ಕೃಷ್ಣಪ್ಪನವರು ಕೇಂದ್ರದ ಮಂತ್ರಿಗಳಾಗಿರಬೇಕಾದರೆ ಆ ರೀತಿ ಕಾಡಿನಲ್ಲಿ ಓಡಾಡುತ್ತಿದ್ದ ದನಗಳನ್ನೆಲ್ಲಾ ಹಿಡಿಸಿ ತಂದು ಅವಕ್ಕೆ ಮೂಗು ದಾರ ಹಾಕಿಸಿ, ಹತ್ತೋಟಿಗೆ ತಂದು ನಮ್ಮ ರಾಜ್ಯಕ್ಕೂ ಮತ್ತೆ ಬೇರೆ ರಾಜ್ಯಗಳಲ್ಲಿರತಕ್ಕ ರೈತರಿಗೆ ಬಹಳ ಸುಲಭ ದರದಲ್ಲಿ ಹಂಚಿದರು. ಅವರು ಅನಿಮಲ್ ಹಸ್ಬೆಂಡರಿ ಡೆವಲಪ್‌ಮೆಂಟ್ ಬಗ್ಗೆ ತುಂಬಾ ಉತ್ಸಾಹದಿಂದ ಎಂದಿಗೂ ಮರೆಯದೇ ಇರುವಂಥಾ ಸ್ಮರಣೀಯವಾದ ಕಾರ್ಯವನ್ನು ಸಾಧನೆ ಮಾಡಿ ಹೋಗಿದ್ದಾರೆ. ಅವರ ಮನಸ್ಸು ಎಷ್ಟು ಧಾರಾಳವಾಗಿತ್ತು ಎಂದರೆ ಇದರಿಂದ ಅವರು ಒಳಗೂ ಹೊರಗೂ ಸಹ ಟೀಕೆಗೆ ಒಳಗಾಗಿದ್ದಾರೆ. ನನಗೆ ಅವರ ಪೂರ್ವೋತ್ತರ ಗೊತ್ತಿರುವ ಹಾಗೆ ಅವರು ಇಷ್ಟೊಂದು ಟೀಕೆಗೆ ಒಳಗಾಗಿರಬೇಕಾದರೆ ಅವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಅವರ ಈ ಒಂದು ಧಾರಾಳತನದ ಗುಣವೇ ಕಾರಣವಾಗಿತ್ತು. ಅವರ ಹತ್ತಿರ ಯಾರೇ ಹೋಗಿ ಜಮೀನು ಕೇಳಿದರೂ ಇಲ್ಲ ಎನ್ನುವ ಮನಸ್ಸು ಬರುತ್ತಿರಲಿಲ್ಲ. ಯಾವಜಾತಿ ಸ್ವಜಾತಿ ಎನ್ನದೇ ಇಷ್ಟೊಂದು ಸಾವಿರಾರು ಜನಕ್ಕೆ ಜಮೀನು ಕೊಡುವಂಥ ಸಂದರ್ಭದಲ್ಲಿ ಏನಾಗಿದೆ ಎಂದರೆ ಯಾರಿಗೆ ಅರ್ಹತೆ ಇರಲಿಲ್ಲವೋ ಅಂಥವರಿಗೆಲ್ಲಾ ಕೊಟ್ಟು ಬಿಡುತ್ತಿದ್ದರು. ಬಹುಶ: ಈ ಒಂದು ಧಾರಾಳತನದಿಂದ ಅವರ ಮೇಲೆ ಇಷ್ಟೊಂದು ಟೀಕೆಗಳು ಬರುವುದಕ್ಕೆ ಕಾರಣವಾಗಿತ್ತೋ ಏನೋ. ಅವರ ಜೊತೆಯಲ್ಲಿ ಸಹೋದ್ಯೋಗಿಯಾಗಿ ಕೆಲಸ ಮಾಡತಕ್ಕ ಅವಕಾಶ ಇದ್ದುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಂಥಾ ವ್ಯಕ್ತಿಗಳದು ಅಕಾಲಿಕ ಮರಣವೆಂದು ಹೇಳಿ ದುಃಖಿಸಬೇಕಾಗುತ್ತದೆ. ಅವರು ಇನ್ನು ಕೆಲವಾರು ವರ್ಷಗಳ ಕಾಲ ಇರಬಹುದಾಗಿತ್ತು. ಆದರೆ ಅವರ ಆಯಸ್ಸು ಬೇಗ ಮುಗಿದು ಹೋಯಿತು ಇದು ಒಂದು ಹೆಚ್ಚಿನ ದುಃಖಕ್ಕೆ ಕಾರಣವಾಗಿದೆ.

ಇನ್ನು ಶ್ರೀಮಾನ್. ಎನ್. ರಾಚಯ್ಯನವರು, ಇವರು ನಮಗೆ ಚೆನ್ನಾಗಿ ಗೊತ್ತಿರುವಂಥ ವ್ಯಕ್ತಿ ಸ್ವಾತಂತ್ರ ಹೋರಾಟಗಾರರಲ್ಲಿ ಒಬ್ಬ ಕಾರ್ಯ ಕರ್ತರಾಗಿ ಅಚ್ಚುಮೆಚ್ಚಿನ ರೀತಿಯಲ್ಲಿ ದುಡಿಮೆ ಮಾಡಿದವರು. ಅದಕ್ಕಿಂತ ಹೆಚ್ಚಾಗಿ ರಾಜಕಾರಣಕ್ಕೆ ಹೋದರೆ ಶ್ರೀ ಎನ್. ರಾಚಯ್ಯನವರ ಹೆಸರನ್ನು ಕೇಳದೇ ಇರುವವರೇ ಇಲ್ಲ. ಅವರು ವಿದ್ಯಾ ಸಂಸ್ಥೆಗಳನ್ನು ಕಟ್ಟುವುದಲ್ಲಿ ಪೂರ್ಣವಾದ ಶ್ರಮವನ್ನು ಉಪಯೋಗಿಸಿದ್ದರು, ಜೀವಿತದ ಕಾಲವನ್ನೆಲ್ಲಾ ಅದಕ್ಕಾಗಿ ಉಪಯೋಗಿಸಿದ್ದರು.

ಇದೇ ರೀತಿ ಶ್ರೀ ಎಂ. ಗೋವಿಂದ ರೆಡ್ಡಿಯವರು ರಾಜ್ಯಸಭಾ ಸದಸ್ಯರಾಗಿದ್ದರು. ಬಹುಶ: ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ಎಂದು ಕಾಣುತ್ತದೆ. ಅವರು ಎಲ್ಲರಿಗಿಂತಲೂ ಒಂದು

ರೀತಿಯಲ್ಲಿ ಹೆಚ್ಚಿನ ಮೇಧಾವಿಗಳು ಎಂದು ನನಗೆ ತಿಳಿದಿದೆ. ತುಂಬಾ ವಿಷಯಗಳನ್ನು ತಿಳಿದುಕೊಂಡಂಥ ವರಾಗಿದ್ದರು, ಬಹಳಷ್ಟು ವಿಷಯಗಳನ್ನು ಅಧ್ಯಯನ ಮಾಡಿದ್ದರು, ಓದುವುದರಲ್ಲಿ ಅವರಿಗೆ ತುಂಬಾ ಆಸಕ್ತಿ ಇತ್ತು. ವಿಷಯಗಳನ್ನು ಸಮರ್ಥನೆ ಮಾಡುವುದರಲ್ಲಿಯಾಗಲಿ, ಚರ್ಚಾ ಕೂಟದಲ್ಲಿ ಭಾಗವಹಿಸುವುದೇ ಆಗಲೀ ತುಂಬಾ ಶ್ರೇಷ್ಠವಾದ ವ್ಯಕ್ತಿಯಾಗಿ ಕಾಣುತ್ತಿದ್ದರು ಅಂಥವರು ಸಹ ಇವತ್ತು ನಮ್ಮನ್ನು ಆಗಲಿ ಹೋಗಿದ್ದಾರೆ.

ಇನ್ನು ಶ್ರೀಮಾನ್ ಸೋಲೂರು ಸಿದ್ದಪ್ಪನವರಂತೂ ನನಗೆ ತುಂಬಾ ಪರಿಚಯಸ್ಥರಾಗಿದ್ದಂಥ ವ್ಯಕ್ತಿಗಳಾಗಿದ್ದರು. ಅವರ ಜೊತೆಯಲ್ಲಿ ಕೆಲಸ ಮಾಡತಕ್ಕಂಥಾ ಅವಕಾಶ ನನಗಿತ್ತು. ಅವರಿಗೆ ತುಂಬಾ ವಯಸ್ಸಾಗಿತ್ತು. ತುಂಬಾ ವಯಸ್ಸು ಬಾಳಿ ಹೋಗಿದ್ದಾರೆ. ಅವರಿಗೆ ಮರಣ ಕಾಲದಲ್ಲಿ ಬಹುಶ: ೯೦ ವರ್ಷಕ್ಕೂ ಮೇಲಾಗಿರಬಹುದೆಂದು ಕೇಳಿದ್ದೇನೆ ಆದರೆ ಅವರಲ್ಲಿ ನಾನು ಕಂಡ ವಿಶೇಷವಾದ ಗುಣವೇನೆಂದರೆ, ಅವರು ಯಾವುದೇ ಸಂದರ್ಭದಲ್ಲಿಯಾಗಲೀ ಒಬ್ಬ ನಂಬಿದ ವ್ಯಕ್ತಿಯನ್ನು ಕೈ ಬಿಟ್ಟವರು ಅಲ್ಲ. ದಿ ಕೆಂಗಲ್ ಹನುಮಂತಯ್ಯನವರ ಜೊತೆಯಲ್ಲಿ ಬಂದವರು ಕೊನೆಯವರೆಗೂ ಶ್ರೀಮಾನ್ ಹನುಮಂತಯ್ಯನವರ ಸ್ನೇಹಿತರಾಗಿ ಉಳಿದಿದ್ದರು. ಅವರು ಜೀವನದಲ್ಲಿ ಕೂಡ ಬಹಳ ಸರಸಿಗಳಾಗಿದ್ದರು, ಬಹಳ ರಸಿಕರಾಗಿದ್ದರು, ಅದೇರೀತಿ ಅವರು ಶಾಸನಸಭೆಯಲ್ಲಿ ಇರಲಿ ಬಿಡಲಿ ಅವರು ಕೊನೆಯವರೆಗೂ ತುಂಬು ಜೀವನವನ್ನು ನಡೆಸಿ ಅವರು ಈ ಲೋಕವನ್ನು ಬಿಟ್ಟಿದ್ದಾರೆ. ಶ್ರೀ ಬಿ.ಎನ್. ರಾಮೇಗೌಡರು ಮತ್ತು ನಾನೂ ಜೊತೆಯಲ್ಲಿ ಶಾಸಕನಾಗಿ ಕೆಲಸ ಮಾಡತಕ್ಕ ಅವಕಾಶ ನನಗೆ ಸಿಕ್ಕಿತ್ತು. ಅವರ ವ್ಯಕ್ತಿ ಪರಿಚಯ ನನಗೆ ಚೆನ್ನಾಗಿ ಇದೆ, ಅವರು ರೈತ ಸಂಘಟನಾ ಕಾರ್ಯದಲ್ಲಿ ಹೆಚ್ಚು ಶ್ರದ್ಧೆ ವಹಿಸಿ ಕೆಲಸ ಮಾಡಿದವರು. ಅದೇ ರೀತಿ, ಡಾ॥ ಕೆ.ಆರ್. ಶ್ರೀಕಂಠೇಶ್ವರ್‌ರವರು ಪ್ರಪ್ರಥಮವಾಗಿ ಶಾಸನ ಸಭೆಗೆ ಸದಸ್ಯರಾಗಿ ಬಂದಿದ್ದು ನನಗೆ ಇನ್ನು ಚೆನ್ನಾಗಿ ಜಾಪಕ ಇದೆ. ಮೈಸೂರಿನ ಕ್ರಾಫರ್ಡ್ ಹಾಲಿನಲ್ಲಿ ಪ್ರಥಮವಾಗಿ ಸಭೆ ನಡೆದಾಗ ಅವರು ಸೋಷಿಯಲಿಸ್ಟ್ ಪಕ್ಷದಿಂದ ಚುನಾಯಿತರಾಗಿ ಬಂದರು. ಅವರು ಮೊದಲನೇ ದಿವಸ ಸಭೆಗೆ ಬರುವಾಗ ಕೆಂಪು ಟೋಪಿ ಧರಿಸಿಕೊಂಡು ಬಂದದ್ದು ಇನ್ನೂ ನನಗೆ ಕಣ್ಣಲ್ಲಿ ಕಟ್ಟಿದ ಹಾಗೆ ಇದೆ. ಅವರು ಅಲ್ಲಿಂದ ನಿವೃತ್ತಿ ಹೊಂದಿದ ಮೇಲೆ ಡಾಕ್ಟರ್ ಆಗಿದ್ದರು. ಜೊತೆಗೆ ಸಹಕಾರಿ ಸಂಘಗಳಲ್ಲಿ ಬಹಳ ಶ್ರದ್ಧೆಯಿಂದ ಕೆಲಸ ಮಾಡಿಕೊಂಡು ಬಂದಂತಹ ವ್ಯಕ್ತಿ. ಅವರು ಸಾರ್ವಜನಿಕ ಸೇವೆಯನ್ನು ತುಂಬಾ ಮಾಡುತ್ತಿದ್ದರು. ಮತ್ತೆ ಮಾನ್ಯ ಟಿ.ಕೆ. ಕಂಬಳಿಯವರು ಹಿಂದೆ ಬಾಂಬೆ ಶಾಸನ ಸಭೆಯಲ್ಲಿ ಸದಸ್ಯರಾಗಿದ್ದರು. ಕರ್ನಾಟಕ ಒಂದಾದಮೇಲೆ ಈ ಸಭೆಗೆ ಎರಡು ಬಾರಿ ಚುನಾಯಿತರಾಗಿ ಬಂದಿದ್ದರು, ಅವರನ್ನು ಸಹ ನಾವು ಒಂದಲ್ಲಾ ಒಂದು ರೀತಿಯಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಇವರೆಲ್ಲರೂ ಕೂಡ ಯಾವುದಾದರೂ ಒಂದು ತತ್ವವನ್ನಾಗಲೀ ಅಥವಾ ಒಬ್ಬರು ಮುಖಂಡರನ್ನಾಗಲೀ ಹಿಡಿದರೆ ಅವರನ್ನು ಕೈಬಿಟ್ಟು ಸಮಯಕ್ಕೆ ತಕ್ಕ ಹಾಗೆ ಜಾರಿ ಕೊಳ್ಳುವಂತಹ ಮನೋಭಾವವುಳ್ಳವರಾಗಿರಲಿಲ್ಲ. ಮಾನ್ಯ ಕಂಬಳಿಯವರೂ ಕೂಡ ಅಂಥವರ ಪೈಕಿ ಒಬ್ಬರು. ಒಮ್ಮೆ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಆದ ಒಳಜಗಳಗಳ ಪರಿಣಾಮವಾಗಿ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿ ಪದವಿಯನ್ನು ಬಿಡುವ ಪರಿಸ್ಥಿತಿ ಬಂದಾಗ, ಮಾನ್ಯ ಕಂಬಳಿಯವರನ್ನು ಕೂಡ ಬದಲಾಯಿಸಬೇಕೆಂದು ಯಾರ್ಯಾರು ಎಷ್ಟೆಷ್ಟು ಪ್ರಯತ್ನ ಮಾಡಿದರೂ, ಸಾಧ್ಯವಾಗಲಿಲ್ಲ. ಅವರು ಮಾತ್ರ ಯಾರು ಏನು ಹೇಳಿದರೂ ಕೇಳದೆ ಮಾನ್ಯ ನಿಜಲಿಂಗಪ್ಪನವರ ಜೊತೆಯಲ್ಲೇ ಉಳಿದರು ಶ್ರೀಮಾನ್ ನಿಜಲಿಂಗಪ್ಪನವರು ಸೋತರೂ ಅವರನ್ನು ಬಿಟ್ಟು ಹೋಗಲಿಲ್ಲ. ಇವತ್ತಿನ ದಿವಸ ನಮ್ಮನ್ನು ಆಗಲಿ ಹೋಗಿರತಕ್ಕಂಥ ಎಲ್ಲ ಮಾಜಿ ಮಂತ್ರಿಗಳು, ಶಾಸಕರು ಎಲ್ಲರೂ ಒಂದೊಂದು ಗುಣದಲ್ಲಿ ವಿಶೇಷವಾದ ರೀತಿಯಲ್ಲಿ ನಡೆದುಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ನಾವು ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ ಮತ್ತು ಅವರ ಕುಟುಂಬಕ್ಕೂ ಕೂಡ ಅವರುಗಳ ಆಗಲಿಕೆಯಿಂದ ಉಂಟಾಗಿರತಕ್ಕ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ, ಆ ಒಂದು ದುಃಖವನ್ನು ಸ್ವಲ್ಪ ಮಟ್ಟಿಗಾದರೂ ಸೇರಿಸಿಕೊಳ್ಳುವುದರಲ್ಲಿ ನಾವೆಲ್ಲರೂ ಪಾಲ್ಗೊಳ್ಳುತ್ತೇವೆಂದು ಹೇಳಿ ತಾವು ಪಂಡಿಸಿರತಕ್ಕ ನಿರ್ಣಯಕ್ಕೆ ಪೂರ್ಣ ಬೆಂಬಲವನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಪಿ. ಪೆಂಕಟರಮಣ. (ಸಮಾಜ ಕಲ್ಯಾಣ ಮಂತ್ರಿಗಳು)—ಸನ್ಮಾನ್ಯ ಅಧ್ಯಕ್ಷರೇ, ನಾವು ಈ ದಿನ ತುಂಬಲಾರದಂತ ನಷ್ಟವನ್ನು ಅನುಭವಿಸಿದ್ದೇವೆ. ನನ್ನ ಜೊತೆಯಲ್ಲಿವಿಧಾನ ಸಭಾ ಉಪ ಸಭಾಧ್ಯಕ್ಷನಿಯಾಗಿದ್ದಂತಹ ಶ್ರೀಮತಿ ಸುಮತಿ ಭಾಲಚಂದ್ರ ಮಡಿವಾಳರವರ ಜೀವನ ಬಹಳ ಸ್ಫೂರ್ತಿಪ್ರದಾಯಕವಾಗಿದೆ ಅವರು ಚಿಕ್ಕಂದಿನಿಂದಲೂ ಸೇವಾ ಮನೋಭಾವವುಳ್ಳವರಾಗಿದ್ದರು.

SRI D. DEVARAJ URS. –Sir may I bring to your attention that while we are discussing Condolence Resolution, it would rather look not so good if there is too much of movement. I am sorry Sir I have to bring this to your notice.

MR SPEAKER.—The hon. Members will please avoid frequent movement

ಶ್ರೀ ಪಿ. ಪೆಂಕಟರಮಣ. ಶ್ರೀಮತಿ ಮಡಿಮನ್‌ರವರು ನನ್ನ ಸಹೋದ್ಯೋಗಿಗಳಾಗಿದ್ದುದರಿಂದ ಅವರ ಗುಣಗಳನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಸರಳ ಜೀವಿಗಳು. ಸಮಾಜದ ಒಳ್ಳೆಯ ಕಾರ್ಯಕರ್ತರು. ಅವರು ಮಹಿಳಾ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಬಹಳವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಉಪಾಧ್ಯಕ್ಷಿಣಿಯಾಗಿದ್ದಂತಹ ಕಾಲದಲ್ಲಿ ಅವರಿಗೆ ಕ್ಯಾನ್ಸರ್ ಕಾಯಿಲೆ ಬಂದಾಗ ನಾನು ಇವತ್ತು ವಿರೋಧ ಪಕ್ಷದ ನಾಯಕರಾಗಿರುವ ಮತ್ತು ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ ಅರಸುರವರಿಗೆ ಒಂದು ಸಲಹೆ ಮಾಡಿದ್ದು ಏನೆಂದರೆ ಶ್ರೀಮತಿ ಮಡಿಮನ್‌ರವರು ತಮ್ಮ ಕಾಯಿಲೆಯನ್ನು ಗುಣಪಡಿಸಿಕೊಳ್ಳುವ ಸಲುವಾಗಿ ವಿದೇಶಕ್ಕೆ ಹೋಗಲು ಅವಕಾಶ ಕೊಡಬೇಕಾಗಿದೆ ಎಂದು ತಿಳಿಸಿದೆ ಅದಕ್ಕೆ ಅವರು ಒಪ್ಪಿ ಶ್ರೀಮತಿ ಮಡಿಮನ್‌ರವರನ್ನು ಬೇರೆ ವಿದೇಶಕ್ಕೆ ಕಾಯಿಲೆ ವಾಸಿ ಮಾಡಿಕೊಳ್ಳಲಿ ಎಂದು ಕಳುಹಿಸಿ ಕೊಡಲಾಯಿತು. ಅವರು ಅಲ್ಲಿಂದ ಹಿಂದುರುಗಿ ಬಂದನಂತರವೂ ಅವರ ಕಾಯಿಲೆ ಬಗ್ಗೆ ನಾನು ಆಗಾಗ್ಗೆ ವಿಚಾರಿಸಿಕೊಳ್ಳುತ್ತಲೇ ಇದ್ದೆ. ಅವರು ಬಾಂಬೆಯಲ್ಲಿದ್ದುಕೊಂಡು ಮಧ್ಯೆ ಮಧ್ಯೆ ಇಲ್ಲಿಗೆ ಬರುತ್ತಿದ್ದುದನ್ನು ನಾನು ಒಪ್ಪುತ್ತಿರಲಿಲ್ಲ. ತಾವು ಚೆನ್ನಾಗಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೆ. ಆದರೆ ದುರ್ದೈವದಿಂದ ಅವರು ಇವತ್ತು ನಮ್ಮ ಮುಂದೆ ಇಲ್ಲ. ನಾನು ಅವರಿಗೆ ಒಮ್ಮೊಮ್ಮೆ ಹೇಳುತ್ತಿದ್ದೆ. ಇದು ಬಹಳ ಕೆಟ್ಟ ಕಾಯಿಲೆ, ಯಾವತ್ತಾದರೂ ತಮಗೆ ವಿಧಿ ಅವಕಾಶ ಕೊಡಲಾರದು ಎಂದು. ಆದರೂ ಕೂಡ ತಾವು ಆದರ ಬಗ್ಗೆ ಚಿಂತೆ ಮಾಡಬೇಡಿ ಎಂದು. ಅವರು ಹೇಳುತ್ತಿದ್ದರು, ಹಾಗೂ ಅವರು ಒಂದೊಂದು ಸಾರಿ ಬಂದು ಸಭೆಯನ್ನು ನಡೆಸಬೇಕೆಂದು ಆಸೆಪಡುತ್ತಿದ್ದರು, ಮತ್ತು ಆತ್ಮಕ್ಕೆ ಸರಿಯಾದ ಶಾಂತಿ ಸಿಗಬೇಕಾದರೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂಬ ಮಾತನ್ನು ಅವರು ಆಡುತ್ತಿದ್ದರು. ಅವರು ಬಹುಶ: ಒಂದೆರಡು ಬಾರಿ ವಿದೇಶಕ್ಕೆ ಹೋಗಿ ಅನುಭವ ಪಡೆದು ಬಂದಿದ್ದರು ಎ.ಐ.ಸಿ.ಸಿ.ಯ ಕಾರ್ಯಾಲಯದ ಒಂದು ನಿರ್ದೇಶನದ ಪ್ರಕಾರ ರಷ್ಯದಲ್ಲಿ ಮಹಿಳೆಯರ ಮತ್ತು ಸಮಾಜದ ಕೆಲಸವನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದುಕೊಂಡು ಬಂದಿದ್ದರು, ತಾಲ್ಲೂಕು ಮಟ್ಟದಲ್ಲಿ ಅನೇಕ ಸವಿತಿಗಳಲ್ಲಿ ಕೆಲಸ ಮಾಡಿದ್ದಾರೆ ೧೯೭೮ರಲ್ಲಿ ಕಾಂಗ್ರೆಸ್ ಇಬ್ಭಾಗವಾದ ಬಳಿಕ ಅವರು ಜಿಲ್ಲಾ ಕಾಂಗ್ರೆಸ್ಸಿನ ಮಹಿಳಾ ವಿಭಾಗದ ಸಂಚಾಲಕರಾಗಿ ಕೆಲಸ ಮಾಡಿದ್ದಾರೆ ಹಾಗೂ ಅನೇಕ ವರ್ಷಗಳ ಕಾಲ ಶಾಸಕರಾಗಿ ಕೆಲಸ ಮಾಡಿದ್ದಾರೆ. ಅಂಥ ಶೀಲವಂತ ಮಹಿಳೆಯನ್ನು ಕಳೆದುಕೊಂಡಿದ್ದು ದುರ್ದೈವ. ಅವರಿಗೆ ಒಬ್ಬ ಗಂಡು ಮಗ ಮತ್ತು ೩ ಜನ ಹೆಣ್ಣುಮಕ್ಕಳು ಇದ್ದಾರೆ. ಅವರೆಲ್ಲರಿಗೂ ಅವರ ತಾಯಿಯು ಅಗಲಿಕೆಯಿಂದ ಉಂಟಾಗಿರತಕ್ಕ ದು:ಖವನ್ನು ಮತ್ತು ತುಂಬಲಾರದ ನಷ್ಟವನ್ನು ಸಹಿಸಿಕೊಳ್ಳತಕ್ಕ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಎರಡನೆಯದಾಗಿ, ನಮ್ಮನ್ನು ಅಗಲಿರುವ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಪ್ರಜಾ ಪ್ರತಿನಿಧಿಯ ಸಭಾ ಸದಸ್ಯರಾಗಿದ್ದರಲ್ಲದೆ ವಿಧಾನ ಸಭಾ ಸದಸ್ಯರಾಗಿದ್ದರು ಮತ್ತು ಮುಖ್ಯ ಮಂತ್ರಿಗಳು ಆಗಿದ್ದರು. ಅವರು ಕರ್ನಾಟಕ ವಿಧಾನ ಸೌಧದ ನಿರ್ಮಾಪಕರು (ಶಿಲ್ಪಿ) ಎಂದು ಜನ ಹೇಳತಕ್ಕ ಮಾತನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು. ಅವರಲ್ಲಿ ಅನೇಕ ಸದ್ಗುಣಗಳಿದ್ದವು ಹಿಂದುಳಿದ ಜನರಿಗೆ ಸಹಾಯ ಮಾಡಬೇಕೆಂದಾಗ ಎಷ್ಟೇ ವಿರೋಧ ಬಂದರೂ ಕೂಡ ಅದನ್ನು ಲೆಕ್ಕಿಸದೆ ಸಹಾಯ ಮಾಡುತ್ತಿದ್ದ ಹಠವಾದಿಗಳು ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ. ಅವರು ಎ.ಐ.ಸಿ.ಸಿ. ಸದಸ್ಯರಾಗಿದ್ದಾಗ ನಾನೂ ಕೂಡ ಸದಸ್ಯನಾಗಿದ್ದೆ. ಆಗ ಪಂಡಿತ ವಲ್ಲಭ ಪಂತ್‌ರವರು ಗೃಹ ಮಂತ್ರಿಗಳಾಗಿದ್ದರು. ಅವರು ಮೂರನೇ ಒಂದು ಭಾಗ ಸದಸ್ಯರು ಕಾರ್ಯ ಕಾರಿ ಸಮಿತಿಗೆ ಆಯ್ಕೆಯಾಗಬಹುದೆಂಬ ನಿರ್ಣಯ ಕೊಟ್ಟಾಗ ನೆಹರೂರವರು ಕೈ ಎತ್ತಿದ್ದರಿಂದ ನಿರ್ಣಯ ಅವರ ಪರವಾಗಿ ಆಯಿತು ಆ ಸಂದರ್ಭದಲ್ಲಿ ಶ್ರೀಮಾನ್ ಪಂತ್ ಶ್ರೀ ದೇಬರವರುಗಳು ಮತ್ತೆ

ಮಾತನಾಡಿ ಇಲ್ಲಿ ಕನ್‌ಫ್ಯೂಷನ್ ಇದೆ ಎಂದು ಹೇಳಿದರು. ಹಣ ಹಿಡಿದು ಅದನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದಾಗ ಶ್ರೀ ಹನುಮಂತಯ್ಯನವರು ಆ ನಿರ್ಣಯವನ್ನು ವಾಪಸ್ಸು ತಗೆದುಕೊಳ್ಳಲಿಲ್ಲ. ಅಂಥಾ ಹಣಗಾರರು ಅವರು ಅವರ ಬಗೆ ಹೇಳಬೇಕೆಂದರೆ, ಕರ್ನಾಟಕ ರಾಜ್ಯದಲ್ಲಿ ಅವರು ಉತ್ತಮ ವಾದ ಕಾರ್ಯಗಳನ್ನು ಮಾಡಿದ್ದಾರೆ. ಹರಿಜನರೊಬ್ಬರನ್ನು ಜಿಲ್ಲಾ ನ್ಯಾಯಾಧೀಶರನ್ನಾಗಿ ಮಾಡಬೇ ಕೆಂದು ಬೇರೆಯವರು ಹೇಳಿದಾಗ ಮಾಡಿಯೇ ಮಾಡುತ್ತೇನೆಂದರು. ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಮೈಸೂರು ಜಿಲ್ಲೆಯಲ್ಲಿ ಅವರ ಅನುಯಾಯಿಗಳಾಗಿದ್ದ ೧೬ ಜನರ ಪೈಕಿ ೩ ಜನ ಮಾತ್ರ ಗೆದ್ದರು. ಮೈಸೂರು ಜಿಲ್ಲೆಯಲ್ಲಿ ೧೬ ಸೀಟುಗಳ ಪೈಕಿ ಆಲ್ಲಿ ಸೋತ ೧೩ ಜನರ ಪೈಕಿ ನಾನೂ ಒಬ್ಬನಾಗಿದ್ದೆ. ೧೯೬೯ರಲ್ಲಿ ಕಾಂಗ್ರೆಸ್ ಎರಡು ಭಾಗವಾದ ನಂತರ ವಿಧಾನ ಪರಿಷತ್ತಿನ ಸದಸ್ಯತ್ವ ಸ್ಥಾನ ಖಾಲಿ ಆದಾಗ ಪಿ. ವೆಂಕಟರಮಣ ಅವರಿಗೆ ಆ ಸ್ಥಾನವನ್ನು ತೊಡಬೇಕೆಂದು ಹಠ ಮಾಡಿದರು.

2–00 ಪಿ.ಎಂ.

ಅಂತಹ ಮಹನೀಯರನ್ನು ನಾವು ಸ್ಮರಣೆ ಮಾಡದೇ ಹೋದರೆ ತಪ್ಪಾಗುತ್ತದೆ.

ಇನ್ನು ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ರಾಜಕೀಯ ಪ್ರವೇಶ ಮಾಡಿದ್ದರು. ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾಗಿದ್ದರು ಕಾನ್‌ಸ್ಟಿ ಟ್ಯೂಯೆಂಟ್ ಅಸೆಂಬ್ಲಿಯ ಸದಸ್ಯರಾಗಿದ್ದರು. ಅವರು ಒಬ್ಬ ನಾಯಕರನ್ನು ನಂಬಿದರೆ ಕೊನೆಯ ವರೆಗೆ ಸತತವಾಗಿ ಅವರನ್ನೇ ನಂಬಿರುತ್ತಿದ್ದರು. ಮಾನ್ಯ ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿ ಯಾಗಿದ್ದಾಗ ೧೯೫೨ರ ಚುನಾವಣೆ ಕಾಲದಲ್ಲಿ ನಮ್ಮ ಗುಂಪಿಗೆ ಬನ್ನಿ ನಿಮ್ಮ ಇವರನ್ನು ಕರೆದಿದ್ದರು. ಆದಕ್ಕೆ ಅವರು ನಾನು ಒಬ್ಬ ನಾಯಕನನ್ನು ನಂಬಿದರೆ ಮತ್ತೊಬ್ಬ ನಾಯಕನ ಜೊತೆ ಹೋಗುವುದಿಲ್ಲ ಅದು ನನಗೆ ಅಭ್ಯಾಸವೂ ಇಲ್ಲ ಎಂದು ಹೇಳಿದರು. ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು ಸ್ವತಂತ್ರ ಹೋರಾಟಗಾರರು ಹಾಗೂ ಮಟ್ಟಿ ಹೋರಾಟಗಾರರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅವರು ಸೀರೆಯನ್ನು ತೊಟ್ಟು ಸರ್ಕಾರದವರಿಗೆ ಗೊತ್ತಾಗದ ಹಾಗೆ ಭಾಷಣಗಳನ್ನು ಮಾಡಿದ ನಿದರ್ಶನಗಳು ಇವೆ. ಅಂತಹ ಕಾಲದಲ್ಲಿ ಹೆಣ್ಣುಮಕ್ಕಳ ರೀತಿ ಸೀರೆ ತೊಟ್ಟು ಭಾಷಣಗಳನ್ನು ಮಾಡಿದಂತಹ ಇವರನ್ನು ಪೋಲೀಸಿನವರು ಹಿಡಿಯಲಾಗಲಿಲ್ಲ. ೧೯೪೨ ರಿಂದ ೧೯೪೭ ರವರೆಗೆ ಇವರು ಎರಡು ಮೂರು ಸಾರಿ ಕಾರಾಗೃಹ ವಾಸವನ್ನು ಅನುಭವಿಸಿದ್ದಾರೆ ಇವರು ಕೇಂದ್ರ ಸರ್ಕಾರದ ಡೆಪ್ಯುಟಿ ಮಿನಿಸ್ಟರ್ ಆಗಿದ್ದರು. ವಿದೇಶ ಪ್ರವಾಸವನ್ನು ಕೈಗೊಂಡಿದ್ದರು. ನಮ್ಮ ರಾಜ್ಯದ ಕಂದಾಯ ಸಚಿವರಾಗಿದ್ದರು ಅವರಷ್ಟು ರಾಜಕೀಯದಲ್ಲಿ ದೀರ್ಘಕಾಲದ್ದವರು ಯಾರೂ ಇಲ್ಲವೆಂದರೆ ತಪ್ಪಾಗಲಾರದು. ಪ್ರಜಾ ಪ್ರತಿನಿಧಿ ಸಭೆಯಿಂದ ಹಿಡಿದು ೧೯೮೦ರ ಲೋಕಸಭೆ ಚುನಾವಣೆ ಆಗುವವರೆಗೆ ಅವರು ರಾಜಕೀಯ ಕ್ಷೇತ್ರದಲ್ಲಿದ್ದರು. ವಿಧಾನಸಭೆಯಾಗಲಿ, ವಿಧಾನ ಪರಿಷತ್ತಾಗಲಿ, ಅಥವಾ ಲೋಕಸಭೆಯಾಗಲಿ—ಹೀಗೆ ಒಂದಲ್ಲಾ ಒಂದು ಕಡೆ ಇವರು ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು.

ಹಾಗೆಯೇ ತಿಟ್ಟಮರ್ನಳ್ಳಿ ವಿ. ವೆಂಕಟಪ್ಪನವರು ಇವರು ಚನ್ನಪಟ್ಟಣ ತಾಲ್ಲೂಕಿನವರು. ಇವರೂ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅಗ್ರಗಣ್ಯರು. ಕಾಂಗ್ರೆಸ್ ಕಟ್ಟಿದಂತಹ ಮಹನೀಯರಲ್ಲಿ ಇವರೂ ಒಬ್ಬರು. ಇವರು ಮಾಜಿ ಮಂತ್ರಿಗಳಾಗಿದ್ದರು.

ಇನ್ನು ಎನ್. ರಾಚಯ್ಯನವರು. ಇವರು ನಮ್ಮ ನಂಜನಗೂಡಿನ ತಾಲ್ಲೂಕಿನವರು. ಇವರು ಕಾರ್ಪೊರ ಜನಾಂಗಕ್ಕೆ ಸೇರಿದವರು. ಇವರು ಮಾಡಿದಂತಹ ಕೆಲಸವನ್ನು, ಯಾವ ಮಂತ್ರಿಯೂ ಮಾಡಿಲ್ಲ ಎಂದರೆ ತಪ್ಪಾಗಲಾರದು. ಸುಮಾರು ೧೬ ಲಕ್ಷ ರೂಪಾಯಿಗಳ ಮೌಲ್ಯದ ಕನಕದಾಸ ವಿದ್ಯಾರ್ಥಿ ನಿಲಯದ (ರಿ) ಆಸ್ತಿಯನ್ನು ಸಾರ್ವಜನಿಕರ ಟ್ರಸ್ಟ್ ಎಂದು ಮಾಡಿದ್ದಾರೆ. ಅವರು ಈಗ ಇರುವ ಚಿಕ್ಕ ಮನೆಯನ್ನೂ ಸಹಾ ಅವರ ಕುಟುಂಬದವರು ಇರುವವರೆಗೂ ಇಟ್ಟುಕೊಂಡು ನಂತರ ಅದನ್ನೂ ಆ ಟ್ರಸ್ಟಿಗೆ ಸೇರಬೇಕೆಂದು ಹೇಳಿದ್ದಾರೆ. ಅವರ ಜೊತೆಯಲ್ಲಿ ನಾನೂ ಕೂಡ ಆ ಕೆಲಸ ಮಾಡಿದ್ದೇನೆ. ಕಳೆದ ೩೦ ವರ್ಷಗಳಿಂದ ಅವರ ಪರಿಚಯ ಉಂಟು. ಹಿಂದುಳಿದ ವರ್ಗದವರಿಗೆ, ಹರಿಜನ ಗಿರಿಜನರಿಗೆ ಕಡು ಬಡವರನ್ನು ಕಂಡರೆ ಅವರು ಅನುಕಂಪವುಳ್ಳವರಾಗಿದ್ದರು. ಅವರು ಕನಕ ದಾಸರ ಸಾರ್ವಜನಿಕ ನಿಲಯ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ ಅದರ ಜವಾಬ್ದಾರಿಯನ್ನು ನನ್ನ ಕೈಗೆ ಒಪ್ಪಿಸಿ ಚೆನ್ನಾಗಿ ನೋಡಿಕೊಳ್ಳಿ ಎಂದು ನನಗೆ ಹೇಳಿದ್ದಾರೆ.

ಇನ್ನು ಮಾನ್ಯ ಮುಖ್ಯ ಸಂಸದೀಯ ಸದಸ್ಯರಾದ ಶ್ರೀ ಎಂ. ಗೋವಿಂದ ರೆಡ್ಡಿಯವರು ಶ್ರೀ ರಾಮೇಗೌಡರು ಮುಂತಾದ ಅನೇಕ ಮಹನೀಯರ ಹೆಸರುಗಳನ್ನು ನಮೂದಿಸಿದ್ದಾರೆ. ಹೀಗೆ ನಾವು ಇವತ್ತಿನ ದಿವಸ ಒಳ್ಳೆಯ ನಾಯಕರುಗಳನ್ನು ಕಳೆದುಕೊಂಡಿದ್ದೇವೆ. ಇಂತಹ ಒಂದು ಸಂತಾಪ ಸೂಚಕ ಸಭೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ಮತ್ತೆ ಈ ಮೃತರುಗಳ ಆತ್ಮಕ್ಕೆ ಶಾಂತಿ ಉಂಟಾಗಲಿ ಮತ್ತು ಅವರ ಕುಟುಂಬವರ್ಗದವರಿಗೆ, ಆಗಿರತಕ್ಕ ದುಃಖವನ್ನು ತಡೆಯತಕ್ಕ ಶಕ್ತಿ ಕೊಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ) —ಮಾನ್ಯ ಸಭಾಪತಿಗಳೇ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ವಿರೋಧಪಕ್ಷದ ನಾಯಕರು, ಮಾನ್ಯ ಮಂತ್ರಿಗಳಾದ ಶ್ರೀ ವೆಂಕಟರಮಣ ಅವರು ಮಾತನಾಡಿದ ವಿಚಾರವಾಗಿ ಮತ್ತು ತಾವು ಮಂಡಿಸಿದ ಸೂಚನೆಗೆ ಬೆಂಬಲ ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀಮತಿ ಸುಮತಿ ಮಡಿಮನ್ ಅವರು ನಮ್ಮ ಮಹಾ ನಗರದ ಅತ್ಯಂತ ಶ್ರೀಮಂತ ಮತ್ತು ಸುಸಂಸ್ಕೃತ ಮನೆತನದಿಂದ ಬಂದ ಒಬ್ಬ ಮಹಿಳೆ. ಅವರ ಪತಿ ನಮ್ಮ ಆತ್ಮೀಯ ಗೆಳೆಯ. ಅವರನ್ನು ನಾನು ಬಹಳ ದಿವಸಗಳಿಂದ ಬಲ್ಲೆ. ಆದರೆ ಅವರು ಮದುವೆಯಾದ ನಂತರದಿಂದ ಆ ದಿನದಿಂದಲೂ ಹುಬ್ಬಳ್ಳಿ ಮತ್ತು ಧಾರವಾಡ ಮಹಾ ನಗರದ ಸಮಾಜ ಸೇವೆಯಲ್ಲಿ ನಿರತರಾದಂತಹ ಒಬ್ಬ ಶ್ರೇಷ್ಠ ಉಚ್ಚ ಮಟ್ಟದ ಮಹಾ ನಾಯಕಿ. ಅದರಲ್ಲೂ ಮಕ್ಕಳ ಮತ್ತು ಮಹಿಳೆಯರ, ಹಿಂದುಳಿದ ಸಮಾಜದ ಸೇವೆಗಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡ ಶ್ರೀಮಂತ ಮಹಿಳೆಯನ್ನು ಕಾಣುವುದು ದುರ್ಲಭ. ಅಂತಹದರಲ್ಲಿಯೂ ಅವರು ಒಬ್ಬ ಶ್ರೇಷ್ಠರಾಗಿದ್ದರು ಅತ್ಯಂತ ಸೌಜನ್ಯ ಮೂರ್ತಿಯಾಗಿ ತಮ್ಮ ಕ್ಷೇತ್ರದ ತಮ್ಮ ಜಿಲ್ಲೆಯ ತಮ್ಮ ನಗರ ಎಲ್ಲಾ ರಾಜ್ಯಕ್ಕೆ ಅತ್ಯಂತ ವೆಚ್ಚುಗೆ ಬರುವ ರೀತಿಯಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ. ತಪ್ಪಾಗಿಭಾವಿಸಬಾರದು ಅವರ ಸೇವಾವಧಿಯಲ್ಲಿ ಅವರು ಸಭೆಯ ಕಾರ್ಯಕಲಾಪವನ್ನು ನಡೆಸುವಾಗ ಅಷ್ಟು ಒಳ್ಳೆಯ ರೀತಿಯಿಂದ ಬಾಳಿಗಾರವರ ನಂತರ ಅತ್ಯಂತ ಒಳ್ಳೆಯ ರೀತಿಯಿಂದ ನಡೆಸಿಕೊಂಡು ಬಂದವರು ಇವರನ್ನು ಬಿಟ್ಟರೆ ಬೇರೆ ಇಲ್ಲಾ ಎಂದು ಹೇಳಿದರೆ ತಪ್ಪಾಗಲಾರದು ಇವತ್ತು ಉಚ್ಚ ಮಟ್ಟದ ಸಮಾಜ ಸೇವಕಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಸೇವೆ ನಮಗೆ ಇನ್ನೂ ಲಭಿಸಬೇಕಾಗಿತ್ತು. ವಿಧಿಲೀಲೆ ನನಗಂತೂ ಅವರ ನಿಧನದಿಂದ ವೈಯಕ್ತಿಕವಾಗಿ ಬಹಳ ದೊಡ್ಡ ನಷ್ಟವಾಗಿದೆ.

ಶ್ರೀಮಾನ್ ಹನುಮಂತಯ್ಯನವರ ಬಗ್ಗೆ ಹೇಳಬೇಕೆಂದರೆ, ಅವರನ್ನು ನಾನು ಒಬ್ಬ ಯುವಕನಾಗಿ ಮುಂಬೈ ಕರ್ನಾಟಕ ರಾಜಕೀಯದಲ್ಲಿ ಒಂದು ಸ್ಥಳದಲ್ಲಿಂತೂ ವಿದ್ಯಾರ್ಥಿಯಾಗಿ ಕಂಡಿದ್ದೇನೆ. ಕರ್ನಾಟಕ ಏಕೀಕರಣ ಆಗುವುದಕ್ಕಿಂತ ಒಂದು ವರ್ಷದ ಮೊದಲು ನಾನು ಅವರನ್ನು ಮೊದಲನೆಯ ಸಲ ಕಂಡದ್ದು ಆಲ್ಲಿಗೆ ಅಂದಿನ ಮೈಸೂರು ಮಹಾರಾಜರು ಬಂದಿದ್ದರು. ಅವರು ಬಂದ ಸ್ವಲ್ಪ ದಿವಸಗಳ ನಂತರ ಶ್ರೀ ಹನುಮಂತಯ್ಯ ಅವರು ಆಲ್ಲಿಗೆ ಬಂದಿದ್ದರು. ಅಲ್ಲಿ ಇಬ್ಬರ ನಡುವಿನ ವ್ಯತ್ಯಾಸವೇನೆಂದರೆ, ಮಹಾರಾಜರಿಗಿಂತಲೂ ಶ್ರೀ ಹನುಮಂತಯ್ಯನವರನ್ನು ನೋಡಲು ಅಲ್ಲಿ ಹೆಚ್ಚು ಜನ ಸೇರಿದ್ದರು. ಕಾರಣ ಇಷ್ಟೇ, ಶ್ರೀಮಾನ್ ಹನುಮಂತಯ್ಯನವರು ಕರ್ನಾಟಕ ಏಕೀಕರಣಕ್ಕಾಗಿ ಒಂದು ನಿಷ್ಠೂರವಾದ ನಿಲುವೆಯನ್ನು ತಳೆದಿದ್ದರು. ಅವರ ಜೀವನದ ವಿವಿಧ ರಂಗಗಳನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ಆದರೆ ನಾನು ಕಂಡ ಹನುಮಂತಯ್ಯನವರು ಅತ್ಯಂತ ಶ್ರೇಷ್ಠ ಮುತ್ಸದ್ದಿ ಮತ್ತು ಮೇಧಾವಿ ದಕ್ಷ ಆಡಳಿತಗಾರ. ಅವರು ಒಂದು ಮಾತನ್ನು ಪಂಡಿತ್ ಜವಹರಲಾಲ್ ನೆಹರೂರವರು ಮಾತನಾಡಿದಂತಹ ಎ.ಐ.ಸಿ.ಸಿ. ಸಭೆಯಲ್ಲಿ ಹೇಳಿದರು. ಅವರು ಹೇಳಿದ ಆ ಒಂದು ಮಾತನ್ನು ನಾನು ಮನದಾಳದಲ್ಲಿ ಮೂಡಿಸಿಕೊಂಡೆ. ಪಂಡಿತ್ ಜವಹರಲಾಲ್ ನೆಹರೂರವರ ವಿರುದ್ಧವಾಗಿ ಅಭಿಪ್ರಾಯವನ್ನು ವ್ಯಕ್ತ ಮಾಡದೆ ಒಂದು ಮಾತನ್ನು ಹೇಳಿದರು. "You are like a great banyan tree, you will never let anything grow under you' ಎಂದು ಹೇಳಿದರು. ಈ ಮಾತಿನ ಒಂದು ಮರ್ಮವನ್ನು ನಾವು ಅರಿತಾಗ ನೆಹರೂ ಅವರಿಗೆ ಏನು ಕೊಡಬೇಕೋ ಆ ಗೌರವವನ್ನು ಕೊಡುತ್ತಾ ಆ ದಿನ, ಆಲದ ಮರದ ಕೆಳಗೆ ಬೇರೆ ಏನೂ ಬೆಳೆಯುವುದಿಲ್ಲವೋ ಹಾಗೇ ನೆಹರೂರವರು ಬೇರೆಯವರಿಗೆ ಪ್ರಜಾಪ್ರಭುತ್ವದಲ್ಲಿ ಬೆಳೆಯುವುದಕ್ಕೆ ದಾರಿ ಕೊಡುತ್ತಾ ಇಲ್ಲವೆಂದು ಮಾರ್ಮಿಕವಾಗಿ ಹೇಳಿದಂತಹ ನಿಷ್ಠೂರವಾದಿ ಈ ಹನುಮಂತಯ್ಯನವರು. ಅದಕ್ಕೆ ಏನೋ ಇವರು ಬರೀ ರಾಜಕಾರಣದಲ್ಲಿ ಅಲ್ಲ ರಾಷ್ಟ್ರದ ಮಹತ್ವ

ಮುಂದಾಳತ್ವದಲ್ಲಿ ಅತ್ಯಂತ ಮುತ ದಿ ಗಳಾಗಿದ್ದರು. ಈ ಮಾತನ್ನು ಹೇಳಂವಾಗ ಒಬ್ಬ ಇಂಗ್ಲೀಷ್ ರಾಜಕಾರಣಿ ಹೇಳಿದ ಮಾತು ಪದೇ ಪದೇ ನೆನಪಿಗೆ ಬರುತ್ತದೆ. ಅವರು ಬರೀ ರಾಜಕಾರಣಿ ಅಲ್ಲ. ಮೇಧಾವಿಗಳು. He was a statesman. Politician has an eye on the next election, statesmen has an eye on the next generation ಶ್ರೀ ಹನುಮಂತಯ್ಯ ಅವರು ಒಬ್ಬ ಸ್ಟೇಟ್ಸ್‌ಮೆನ್ ಆಗಿದ್ದರು ಈ ಒಂದು ಮುಂದಾಲೋಚನೆಯಲ್ಲಿಯೇ ವಿಧಾನಸೌಧವನ್ನು ಕಟ್ಟಿದ್ದರು. ಕರ್ನಾಟಕ ಏಕೀಕರಣ ಆದಮೇಲೆ ಒಬ ವಕೀಲನಾಗಿ ಅತ್ಯಂತ ಒಂದು ಮಹತ್ವದ ಆಜ್ಞೆ ಪಡೆಯುವುದಕ್ಕಾಗಿ ನಾನು ಹೈಕೋರ್ಟಿಗೆಬಂದೆ. ಮುಂಬೈ ರಾಜ್ಯದಲ್ಲಿ. ಮುಂಬೈ ಪಟ್ಟಣದಲ್ಲಿ ಭವ್ಯವಾದ ಸರ್ಕಾರಿ ಕಟ್ಟಡ, ಭವ್ಯವಾದ ಹೈಕೋರ್ಟ್ ಕಟ್ಟಡವನ್ನು ನೋಡಿದ್ದ ನನಗೆ ಇಲ್ಲಿಗೆ ಬಂದಾಗ ಒಂದು ರೀತಿಯ ಬೇಜಾರುಆಯಿತು. ಆಡಳಿತಕಛೇರಿಯಲ್ಲಿ ಮುಖ್ಯಮಂತ್ರಿಗಳ ಕೊಠಡಿ ಬೇರೆ ಮಂತ್ರಿಗಳ ಕೊಠಡಿ ಮತ್ತು ಅಧಿಕಾರಿಗಳ ಕೊಠಡಿ ಎಲ್ಲಾ ಒಂದೇ ರೀತಿಯಾಗಿದ್ದವು. ಆಗ ನನಗೆ ಇಲ್ಲಿ ರಾಜ್ಯದ ಆಡಳಿತ ಹೇಗೆ ನಡೆಯುತ್ತಿದೆ ಎಂದು ಸ್ವಲ್ಪ ಅನುಮಾನವೂ ಆಯಿತು. ಆಗಿನ್ನೂ ವಿಧಾನ ಸೌಧ ಕಟ್ಟುತ್ತಿದ್ದರು, ಕಟ್ಟುತ್ತಿದ್ದ ವಿಧಾನ ಸೌಧವನ್ನು ನೋಡಿದ ಮೇಲೆ ಶ್ರೀ ಹನುಮಂತಯ್ಯನವರ ಮುಂದಾಲೋಚನೆ ಮತ್ತು ರಾಜಕೀಯ ದೃಷ್ಟಿಕೋನ ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ವಿಧಾನ ಸೌಧವನ್ನು ನಿರ್ಮಿಸಿ ಇಲ್ಲಿ ಸರ್ಕಾರದ ಆಡಳಿತ ನಡೆಯುವ ಹಾಗೆ ಅವಕಾಶ ಮಾಡಿಕೊಟ್ಟ ಮಹಾನ್ ವ್ಯಕ್ತಿ ಶ್ರೀ ಹನುಮಂತಯ್ಯನವರು. ಇಂತಹ ಮಹಾನ್ ವ್ಯಕ್ತಿಯ ಪ್ರತಿಮೆಯನ್ನು ಈ ವಿಧಾನ ಸೌಧದ ಮುಂದೆ ರಚಿಸಿ ನಿಲ್ಲಿಸತಕ್ಕ ನಿರ್ಧಾರವನ್ನು ತೆಗೆದುಕೊಂಡ ಸರ್ಕಾರಕೆ ನಾನು ಮೆಚ್ಚುಗೆ ಸಲ್ಲಿಸುತ್ತೇನೆ. ಅದರ ಜೊತೆಗೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ರಾಜಕೀಯದಲ್ಲಿ ತೋರಿಸಿದ ಪ್ರಾಮಾಣಿಕತೆ, ಮತ್ತು ಸತ್ಚರಿತ್ರೆಯನ್ನು ನಾವು ಆದರ್ಶವಾಗಿಟ್ಟುಕೊಂಡರೆ ಅವರಿಗೆ ನಾವು ನಿಜವಾದ ಗೌರವವನ್ನು ಸಲ್ಲಿಸಿದಂತಾಗುತ್ತದೆಂದು ಹೇಳಬಯಸುತ್ತೇನೆ.

ಮಾನ್ಯ ಎಂ.ವಿ. ಕೃಷ್ಣಪ್ಪನವರ ಬಗ್ಗೆ ಹೆಚ್ಚು ಪರಿಚಯ ನನಗಿಲ್ಲ. ಅವರು ರೈತ ಕುಟುಂಬದಿಂದ ಬಂದು ರೈತರಿಗಾಗಿ ಹೋರಾಟ ಮಾಡಿದ್ದನ್ನು ಕೇಳಿದ್ದೇನೆ, ನೋಡಿದ್ದೇನೆ. ಶ್ರೀ ಕಿದ್ವಾಯಿಯವರು ಕೇಂದ್ರದಲ್ಲಿ ಆಹಾರ ಮಂತ್ರಿಗಳಾಗಿದ್ದಾಗ ಇವರು ಉಪ ಮಂತ್ರಿಗಳಾಗಿದ್ದರು. ಆಗ ಆಹಾರ ಧಾನ್ಯಗಳ ಮೇಲಿದ್ದ ಕಂಟ್ರೋಲ್ ಪದ್ಧತಿಯನ್ನು ತೆಗೆದು ಹಾಕಿದ ಶ್ರೇಯಸ್ಸಿನಲ್ಲಿ ಇವರ ಪಾಲೂ ಇದೆ. ರಾಷ್ಟ್ರದ ಆಹಾರ ಸಮಸ್ಯೆಯನ್ನು ಬಿಡಿಸುವ ದಿಸೆಯಲ್ಲಿ ನೀತಿ ನಿರೂಪಣೆಯನ್ನು ಮಾಡಿದ ಮಹಾನ್ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಅದೇ ರೀತಿ ಅವರು ಕರ್ನಾಟಕ ರಾಜ್ಯಕ್ಕೂ ಸೇವೆಸಲ್ಲಿಸಿದ್ದಾರೆ. ಅವರು ಬಹಳ ಉತ್ಸಾಹ ರಾಜಕೀಯ ಮುಂದಾಳುಗಳಾಗಿದ್ದರು. ಲೋಕಸಭೆ ಚುನಾವಣೆಯಲ್ಲಿ ಗೆದ್ದಾಗಲೂ ಮತ್ತು ಸೋತಾಗಲೂ ಅವರನ್ನು ನಾನು ಕಂಡಿದ್ದೇನೆ. ಗ್ರಾಮಾಂತರ ಪ್ರದೇಶಗಳ ಜನರ ಏಳಿಗೆಗಾಗಿ ಉತ್ಸಾಹದಿಂದ ಚಿಂತನೆ ಮಾಡತಕ್ಕ ನಾಯಕರೊಬ್ಬರನ್ನು ನಾವು ಶ್ರೀ ಕೃಷ್ಣಪ್ಪನವರ ನಿಧನ ದಿಂದ ಕಳೆದುಕೊಂಡಿದ್ದೇವೆ.

ಮಾನ್ಯ ಅಧ್ಯಕ್ಷರು ಇನ್ನೂ ಹಲವಾರು ಸದಸ್ಯರ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಇವರಲ್ಲಿ ನಾನು ಕಂಡು ಮೆಚ್ಚಿದ್ದೆಂದರೆ ಸೋಲೂರು ಸಿದ್ದಪ್ಪನವರು. ನಾನು ಈ ಸಭೆಗೆ ಸದಸ್ಯನಾಗಿ ಬಂದಾಗ ಅವರೂ ಇಲ್ಲಿ ಇದ್ದರು. ಅವರು ಹಳೆಯ ಮೈಸೂರಿನ ಪ್ರತೀಕವೆಂದು ನಾನು ತಿಳಿದುಕೊಂಡಿದ್ದೆ. ಅವರು ಯಾವಾಗಲೂ ಹಳೆಯ ಮೈಸೂರಿನ ಪೇಟ, ಶುಭ್ರವಾದ ಬಟ್ಟೆ ಹಾಗೂ ಶಲ್ಯವನ್ನು ಧರಿಸುತ್ತಿದ್ದರು. ಅವರ ವೇಷಭೂಷಣವನ್ನು ನೋಡಿದಾಗ, ಈ ಹಿರಿಯರಿಗೆ ನಮಸ್ಕಾರ ಮಾಡಬೇಕೆನ್ನುವ ಭಾವನೆ ನಮ್ಮಲ್ಲಿ ಮೂಡುತ್ತಿತ್ತು. ನಮ್ಮ ಪಕ್ಷ ಅಂದು ಎರಡಾದ ಮೇಲೆ ನಾವೊಂದು ಕಾಂಗ್ರೆಸ್‌ನಲ್ಲಿ ಉಳಿದೆವು ಅವರೊಂದು ಕಾಂಗ್ರೆಸ್‌ನಲ್ಲಿ ಉಳಿದರು. ಆ ಸಂದರ್ಭದಲ್ಲಿ ಅವರ ಊರಿಗೆ ನಾವು ಹೋಗಿದ್ದಾಗ ಅವರು ಮಾಡಿದ್ದ ವ್ಯವಸ್ಥೆ ನೋಡಿದರೆ, ಇಳಿವಯಸ್ಸಿನಲ್ಲಿಯೂ ಸಮಾಜ ಸೇವೆ ಮಾಡತಕ್ಕ ಲವಲವಿಕೆ ಅವರಲ್ಲಿ ಎಷ್ಟಿತ್ತು ಎನ್ನುವುದು ಅರಿವಾಗುತ್ತಿತ್ತು. ಅಂತಹವರು ಇಂದು ನಮ್ಮನ್ನು ಆಗಲಿದ್ದಾರೆ.

ಶ್ರೀ ಕಂಬಳಿಯವರ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಚುನಾವಣೆಯಲ್ಲಿ ಅವರಿಂದ ಒಂದು ಸಲ ಸೋತಿದ್ದೇನೆ, ಒಂದು ಸಲ ಗೆದ್ದಿದ್ದೇನೆ. ಅವರು ಎಷ್ಟು ಸರಳವಾದ ಮನಸ್ಸುಳ್ಳವರಾಗಿದ್ದರೆಂದರೆ ನಾನು ಮೊದಲ ಸಲ ಚುನಾವಣೆಗೆ ನಿಂತಾಗ, ಚುನಾವಣಾ ಪ್ರಚಾರ ಕಾರ್ಯ ಪ್ರಾರಂಭ ಮಾಡುವುದಕ್ಕಾಗಿ ಒಂದು ಊರಿಗೆ ಹೋಗಿದ್ದೆನು, ಅಲ್ಲಿನ ಕುರುಬರ ಬೀರೇದೇವರ ದೇವಸ್ಥಾನದಲ್ಲಿ

ಮೊದಲ ಪೂಜೆಯೊಂದಿಗೆ ಚುನಾವಣಾ ಪ್ರಚಾರಕಾರ್ಯ ಪ್ರಾರಂಭ ಮಾಡಬೇಕೆನ್ನುವುದು ಅಲ್ಲಿನವರಿಗೆ ನನಗೆ ಮೂಢ ನಂಬಿಕೆಯಲ್ಲಿ ವಿಶ್ವಾಸವಿಲ್ಲ. ಶ್ರೀ ಕಂಬಳಿಯವರೂ ಕೂಡ ಅಂದೇ ಅಲ್ಲಿಗೆ ಪೂಜೆಗೆ ಬಂದಿದ್ದರು. ಇಬ್ಬರೂ ಒಂದೇ ಸಮಯಕ್ಕೆ ಅಲ್ಲಿಗೆ ಹೋದೆವು. ಆಗ ಅವರು 'ನೀನು ಇನ್ನೂ ಚಿಕ್ಕವ, ಮೊದಲ ಸಲ ಚುನಾವಣೆಗೆ ನಿಂತಿರುವೆ, ಮೊದಲ ಸೇವೆ ನಿನ್ನದೇ ಆಗಲಿ, ಆಮೇಲೆ ನಾನು ಮಾಡುತ್ತೇನೆ, ಅಲ್ಲಿಯವರೆಗೆ ಹೊರಗೆ ಕುಳಿತಿರುತ್ತೇನೆ ಎಂದು ನನಗೆ ಹೇಳಿದರು. ಅವರ ಉದಾರ ನೀತಿಗೆ ಇದೊಂದು ಸಾಕ್ಷಿ. ಅದರಂತೆ ಅವರು ನನ್ನ ಸೇವೆ ಮುಗಿದ ಮೇಲೆ ಅವರ ಸೇವೆ ಮಾಡಿದರು. ರಾಜಕೀಯದಲ್ಲಿದ್ದರೂ ವೈಯಕ್ತಿಕ ಸಂಬಂಧವನ್ನು ಯಾವ ರೀತಿ ಬೆಳೆಸಿ ಉಳಿಸಿಕೊಂಡು ಹೋಗಬೇಕೆನ್ನುವುದನ್ನು ನಾನು ಅವರಿಂದ ಕಲಿತುಕೊಂಡಿದ್ದೇನೆ. ಅವರು ಗೆದ್ದಾಗ ನಾನು ಅವರ ಹತ್ತಿರ ಹೋಗುತ್ತಿದ್ದೆ, ನಾನು ಗೆದ್ದಾಗ ಅವರು ನನ್ನ ಬಳಿಗೆ ಬರುತ್ತಿದ್ದರು. ಅವರು ಹೇಳಿದ ಕೆಲಸಗಳನ್ನು ಮಾಡುತ್ತಿದ್ದೆ. ಆದರೆ, ಇಂದು ಕಾಲ ಕಳೆದಂತೆ ರಾಜಕೀಯದಲ್ಲಿ ಮಧುರ ಬಾಂಧವ್ಯ ಕಡಿಮೆಯಾಗುತ್ತಾ ಬರುತ್ತಿದೆ. ರಾಜಕೀಯದಲ್ಲಿ ನೀತಿ, ಉಚ್ಚಮಟ್ಟದ ನಡವಳಿಕೆ ಮತ್ತು ನೈತಿಕಮೌಲ್ಯಗಳ ಅಧಃಪತನವಾಗುತ್ತಿರುವ ಕಾಲದಲ್ಲಿ ಇಂತಹ ಮಹಾ ನಾಯಕರುಗಳಿಂದ ಸ್ಫೂರ್ತಿ ಪಡೆದು ಅವರ ಎತ್ತರದಲ್ಲಿ ನಡೆಯುವ ಆದರ್ಶ ಪಾಲಿಸೋಣ. ಆಗಲೇ ಅವರಿಗೆ ನಿಜವಾದ ಗೌರವವನ್ನು ನಾವು ಅರ್ಪಿಸಿದಂತಾಗುತ್ತದೆಂದು ಹೇಳಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್ ಗಂಗಾಧರನ್ (ಕೃಷ್ಣರಾಜ). ಮಾನ್ಯ ಅಧ್ಯಕ್ಷರೇ, ಕಣ್ಮರೆಯಾಗಿರತಕ್ಕ ಅನೇಕ ಮಹಾ ವ್ಯಕ್ತಿಗಳ ಬಗ್ಗೆ ಈ ಸಭೆಯು ಶ್ರದ್ಧಾಂಜಲಿಯನ್ನರ್ಪಿಸುತ್ತಿದೆ. ಇವರಲ್ಲಿ ನೇರವಾಗಿ ನಮಗೆ ಪರಿಚಯವಾಗಿದ್ದವರೆಂದರೆ ಶ್ರೀಮತಿ ಸುಮತಿ ದಾಡಿಮನ್ ಅವರು. ಅವರು ಈ ಸಭೆಯ ಉಪಾಧ್ಯಕ್ಷರಾಗಿ ಪಕ್ಷಾತೀತವಾಗಿ ಮತ್ತು ವ್ಯಕ್ತಿಪ್ರತಿಷ್ಠಾತೀತವಾಗಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟು, ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿದರು. ಅವರು ಇಷ್ಟು ಅತ್ಯಲ್ಪ ವಯಸ್ಸಿನಲ್ಲಿ ನಮ್ಮನ್ನು ಬಿಟ್ಟು ಅಗಲಿರುವುದಕ್ಕಾಗಿ ಅತೀವ ದುಃಖವಾಗಿದೆ. ವಿಧಾನ ಮಂಡಲದ ಭಾರತೀಯ ಜನತಾ ಪಕ್ಷದ ಕಾರ್ಯಕಾರಿ ಸಮಿತಿ ಪರವಾಗಿ ನಾನು ಅವರಿಗೆ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ನಾನು ನನ್ನ ಜೀವನದಲ್ಲಿ ಅತ್ಯಂತ ಚಿರಋಣಿಯಾಗಿರಬೇಕಾದಂಥ ವ್ಯಕ್ತಿ ಎಂದರೆ ಶ್ರೀ ಕೆಂಗಲ್ ಹನುಮಂತಯ್ಯನವರು. ಅವರು ಈ ರಾಜ್ಯದಲ್ಲಿ ಜಾರಿಗೆ ತಂದ ಸಂಸ್ಕೃತಿ ಪ್ರಸಾರ ಕಾರ್ಯದ ಲಾಭವನ್ನು ಪಡೆದು, ಅದರಿಂದ ಗಳಿಸಿದ ಹಣದಿಂದ ಕಾಶಿ ವಿಶ್ವವಿದ್ಯಾನಿಲಯದಲ್ಲಿ ಎಂ.ಎ ಪದವಿಯನ್ನು ಪಡೆದವನು ನಾನು. ಆದುದರಿಂದ, ಕೆಂಗಲ್ ಹನುಮಂತಯ್ಯನವರನ್ನು ನಾನು ಜೀವನ ಪರ್ಯಂತ ಸ್ಮರಣೆ ಮಾಡುತ್ತೇನೆ. ಇಲ್ಲಿ ಮಾತನಾಡಿದ ಅನೇಕ ಮಂದಿ ಸದಸ್ಯರು ಶ್ರೀ ಕೆಂಗಲ್ ಹನುಮಂತಯ್ಯನವರ ವಿಷಯವಾಗಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ವ್ಯಕ್ತಿ ಚಿತ್ರಣ ಮಾಡುವಾಗ, ಅವರಲ್ಲಿದ್ದ ದೊಡ್ಡ ಗುಣಗಳಾದ ರಾಷ್ಟ್ರಪ್ರೇಮ ಮತ್ತು ರಾಷ್ಟ್ರಸಮಗ್ರತಾ ಮನೋಭಾವ ನನ್ನ ನೆನಪಿಗೆ ಬರುತ್ತಿದೆ. ಉದಾಹರಣೆ ಕೊಡುವುದಾದರೆ, ನಮ್ಮ ದೇಶದ ಕೀರ್ತಿಯನ್ನು ಜಗತ್ತಿನಲ್ಲೆಲ್ಲ ಪಸರಿಸಿದ ನಮ್ಮ ಸಂಸ್ಕೃತಿಯ ಧ್ಯೋತಕ ಸ್ವಾಮಿ ವಿವೇಕಾನಂದರ ಶಿಲಾಸ್ಮಾರಕವನ್ನು ಕನ್ಯಾಕುಮಾರಿಯಲ್ಲಿ ರಚಿಸುವಲ್ಲಿ ಅಖಿಲಭಾರತ ಸಮಿತಿಯ ಅಧ್ಯಕ್ಷರಾಗಿ ಶ್ರೀ ಕೆಂಗಲ್ ಹನುಮಂತಯ್ಯನವರು ಲಕ್ಷಾಂತರ ರೂಪಾಯಿಗಳನ್ನು ಕೂಡಿ ಹಾಕುವಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ್ದಾರೆ. ಕರ್ನಾಟಕಕ್ಕೆ ಹೆಮ್ಮೆ ತರುವ ವಿಷಯವೆಂದರೆ, ಸ್ವಾಮಿ ವಿವೇಕಾನಂದರನ್ನು ಮೊಟ್ಟಮೊದಲು ವಿದೇಶಕ್ಕೆ ಕಳುಹಿಸಿಕೊಟ್ಟು ಭಾರತದ ಕೀರ್ತಿಯನ್ನು ವಿದೇಶದಲ್ಲೆಲ್ಲ ಬೆಳಗಿಸಿದ ಕೀರ್ತಿ ಮೈಸೂರಿನ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ. ಸ್ವಾಮಿ ವಿವೇಕಾನಂದರಿಗೆ ದಿವ್ಯ ಜ್ಞಾನವನ್ನುಂಟುಮಾಡಿದ ಪವಿತ್ರ ಕನ್ಯಾಕುಮಾರಿ ಸ್ಥಳದಲ್ಲಿ ಶಿಲಾಸ್ಮಾರಕ ನಿರ್ಮಾಣ ಕಾರ್ಯ ಕೈಬಿಟ್ಟು ಹೋಗುತ್ತಿದ್ದಾಗ ಲಕ್ಷಾಂತರ ರೂಪಾಯಿಗಳನ್ನು ಕೂಡಿ ಹಾಕಿ ಅದನ್ನು ಪೂರ್ಣ ಮಾಡಿದವರು ಶ್ರೀ ಕೆಂಗಲ್ ಹನುಮಂತಯ್ಯನವರು. ಆದರೆ, ದುರ್ದೈವದ ಸಂಗತಿ ಎಂದರೆ, ದಿನನಿತ್ಯ ಸಾವಿರಾರು ಜನ ಯಾತ್ರಿಕರು ಅಲ್ಲಿಗೆ ಹೋಗಿ ಪುಣ್ಯ ದರ್ಶನ ಪಡೆದು ಬರುತ್ತಿರುವಾಗ, ಇತ್ತೀಚೆಗೆ ಯಾವುದೋ ಕಾರಣಕ್ಕಾಗಿ ಅಲ್ಲಿಗೆ ದೋಣಿಗಳು ಹೋಗದ ಪರಿಸ್ಥಿತಿ ಉಂಟಾಗಿದೆ. ಇದರ ಬಗ್ಗೆ ತಮಿಳು ನಾಡು ಮತ್ತು ಕೇಂದ್ರ ಸರ್ಕಾರಗಳಿಗೆ ಮನವಿ ಮಾಡಿಕೊಂಡರೂ ಅವರು ಗಮನ ಕೊಡುತ್ತಿಲ್ಲ. ಆದುದರಿಂದ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು

ತವಿಂಳುನಾಡಂ ಸರ್ಕಾರದೊಂದಿಗೆ ವ್ಯವಹಾರ ಮಾಡಿ, ವಿವೇಕಾನಂದರ ಶಿಲಾ ಸ್ಮಾರಕದ ಬಳಿಗೆ ದೋಣಿ ಗಳು ಹೋಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮಾ ಹನುಮಂತಯ್ಯನವರು ಪ್ರಜಾಪ್ರಭುತ್ವವಾದಿಗಳು ಈ ಬಗ್ಗೆ ಬೊಮ್ಮಾಯಿಯವರು, ವೆಂಕಟರಮಣ ಅವರು ಕೂಡ ಹೇಳಿದ್ದಾರೆ. ಯಾರ ಬಗ್ಗೆಯೇ ಆಗಲೀ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸುವಂತ ವ್ಯಕ್ತಿಯಾಗಿದ್ದರು. ಅವರಲ್ಲಿದ್ದ ದೊಡ್ಡ ಗುಣವೆಂದರೆ ಸರ್ವಧರ್ಮ ಸಮಭಾವನೆ ; ಒಂದು ಧರ್ಮವನ್ನು ಮೇಲೆತ್ತುವುದಾಗಲೀ, ಮತ್ತೊಂದು ಧರ್ಮವನ್ನು ಕೆಳಗೆ ಮಾಡುವುದಾಗಲೀ ಅವರು ಮಾಡಲಿಲ್ಲ. ಎಲ್ಲ ಧರ್ಮಗಳ ಬಗ್ಗೆಯೂ ಸರ್ವ ಗೌರವವನ್ನು ವ್ಯಕ್ತಪಡಿಸುತ್ತಿದ್ದರು. ಅವರು ನಿಜಜೀವನದಲ್ಲಿ ಅನುಷ್ಠಾನಕ್ಕೆ ತಂದಂಥಾದ್ದು ಗಾಂಧೀ ಪ್ರಣೀತ ಸಮಾಜವಾದವನ್ನು. ಅವರು ಸಮಾಜವಾದದಲ್ಲಿ ಬಹಳ ವಿಶ್ವಾಸವುಳ್ಳವರಾಗಿದ್ದರು. ದಿವಂಗತ ಕೆಂಗಲ್ ಹನುಮಂತಯ್ಯನವರು ಗಾಂಧೀ ಪ್ರಣೀತ ಸಮಾಜವಾದದಲ್ಲಿ ನಂಬಿಕೆಯು ಕಾರುಣಾಗಿ ವಿಧಾನ ಸಭೆಯ ಅಧ್ಯಕ್ಷರು ಕುಳಿತಿರುವ ಪೀಠದ ಮುಂಭಾಗದಲ್ಲಿ ಮೂರು ಉತ್ತಮ ಚಿತ್ರಗಳನ್ನು ಬಿಡಿಸಿದ್ದಾರೆ. ಮಧ್ಯದಲ್ಲಿ ಮಹಾತ್ಮಗಾಂಧಿ ಯವರು ನೂಲು ತೆಗೆಯುವುದು; ಒಂದು ಕಡೆ ಉಳುವ ರೈತ, ಮತ್ತೊಂದು ಕಡೆ ಪೈರು ನೆಡುವ ಹೆಣ್ಣು ಮಕ್ಕಳ ಚಿತ್ರ. ಇದರಿಂದ ಅವರಿಗೆ ಗಾಂಧೀ ಪ್ರಣೀತ ಸಮಾಜವಾದದಲ್ಲಿ ಎಷ್ಟೊಂದು ನಂಬಿಕೆ ಇತ್ತು ಎನ್ನುವುದು ಗೊತ್ತಾಗುತ್ತದೆ. ಅವರು ರಾಜಕಾರಣಿಗಳು ಆಷ್ಟೇ ಅಲ್ಲ; ಸ್ಟೇಟ್ಸ್ ಮನ್ ಆಗಿದ್ದರು. ಅವರು ಮೌಲ್ಯಪೂರಿತ ರಾಜಕಾರಣಿಯಾಗಿದ್ದರು. ಮಂತ್ರಿ ಪದವಿ ಹೋದರೂ ಚಿಂತೆಯಿಲ್ಲ; ಕರ್ನಾಟಕ ಏಕೀಕರಣಕ್ಕಾಗಿ ದುಡಿದ ವ್ಯಕ್ತಿ. ಇಂಥವರ ಸ್ಮರಣೆ ಮಾಡಲಿಕೆ ಇಚ್ಛೆಪಡುತ್ತೇನೆ.

ಇನ್ನು ಅವರು ಮಾಡಿದಂತ ಕೃತಿಗಳನ್ನು ಕುರಿತು ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ಮುಖ್ಯಮಂತ್ರಿಗಳಾಗುವುದು; ಮಂತ್ರಿಗಳಾಗುವುದು ದೊಡ್ಡದಲ್ಲ. ಮುಖ್ಯ ಮಂತ್ರಿ ಗಳಾಗಿ ಇಂಥ ಭವನವನ್ನು ನಿರ್ಮಾಣ ಮಾಡಬಲ್ಲರೇ ಎಂಬುದು ವಿಚಾರಾರ್ಹವಾದ ಸಂಗತಿ. ಬೆಂಗಳೂರು ನಗರ ಈ ರಾಜ್ಯದ ರಾಜಧಾನಿ; ಇಲ್ಲಿ ವಿಧಾನ ಮಂಡಲ ಇದೆ; ಅದೇ ರೀತಿ ಶ್ರೇಷ್ಠ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಒಂದು ನ್ಯಾಯ ಸೌಧ ನಿರ್ಮಾಣವಾಗಬೇಕಾಗಿದೆ. ಅದನ್ನು ಯಾರು ಮಾಡುತ್ತಾರೋ ತಿಳಿಯದು. ವಿಧಾನ ಸೌಧವನ್ನು ಕೆಂಗಲ್ ಹನುಮಂತಯ್ಯನವರು ನಿರ್ಮಾಣ ಮಾಡಿದ್ದರ ಬಗ್ಗೆ ಬಹಳ ಜನ ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ಮಂತ್ರಿ ಮಂಡಲದ ಸಭೆಗೆ ಗಂಧದ ಬಾಗಿಲನ್ನು ಇಡಿಸಿದ್ದಾರೆ. ವಿಧಾನ ಸೌಧದ ಮುಂಭಾಗದಲ್ಲಿ ಸರ್ಕಾರೀ ಕೆಲಸ ದೇವರ ಕೆಲಸ ಎಂದು ಕೆತ್ತಿಸಿದ್ದರು. ಗಂಧದ ಬಾಗಿಲ ಬಗ್ಗೆ ನಾನು ತಿಳಿದಿರುವಂತೆ,

ಗಂಧದ ಗುಡಿಯಿದು ಕೈಮುಗಿದು
ಒಳಗೆ ಬಾ ಯಾತ್ರಿಕನೆ.
ನಿನ್ನಂತರಂಗದ ದುರಾಸೆ ದುರ್ವಾಸನೆಗಳನ್ನೆಲ್ಲಾ
ಹೊರಗೆ ಬಿಟ್ಟು, ಒಳಗೆ ಬಾ ಯಾತ್ರಿಕನೆ.
ನಿನ್ನೀ ಪರಿಮಳದ ಪರಿಸರದಿ ಪರಿಪರಿಯ
ನಿರ್ಧಾರಗಳ ಕೈಗೊಂಡು ಜನಕೆ ಸುಗಂಧ
ಪೂರಿತ ಸಂದೇಶಗಳನು ಬಿತ್ತರಿಸು.
ಕನ್ನಡ ನಾಡ ಕೀರ್ತಿಯನ್ನು ಎತ್ತರಿಸು
ವಿಸ್ತರಿಸು, ಅದಕಾಗಿ ಕೈವಮುಗಿದು
ಒಳಗೆ ಬಾ ಯಾತ್ರಿಕನೆ.

ಎಂಬ ಭಾವನೆಯಿಂದ ಗಂಧದ ಬಾಗಿಲ ನಾಡ ಏರ್ಪಡಿಸಿದ್ದಾರೆಂದು ಭಾವಿಸುತ್ತೇನೆ. ಆದರೆ, ಒಳಗೆ ಹೋಗತಕ್ಕಂಥ ಮಂತ್ರಿಗಳು ದುರಾಸೆ, ದುರ್ಭಾವನೆಗಳನ್ನು ಬಿಟ್ಟು ಜನತೆಯ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿ ಎನ್ನುವ ಅಪೇಕ್ಷೆಯನ್ನು ವ್ಯಕ್ತಪಡಿಸುವಂತೆ ಮಾಡಿದ್ದಾರೆ. ಮತ್ತು ಅವರು ಸಂಸ್ಕೃತ ಪ್ರಸಾರಕ್ಕಾಗಿ ಮಾಡಿದ ಕೆಲಸ ಅಪಾರವಾದುದು. ನಮ್ಮ ಮುಖ್ಯಮಂತ್ರಿಗಳು ಕೆಂಗಲ್ ಹನುಮಂತಯ್ಯನವರ ಮತ್ತು ಡಾ॥ ಅಂಬೇಡ್ಕರ್‌ರವರ ಪ್ರತಿಮೆಯನ್ನು ಪಾಕುತೆ ಎಂದು ಹೇಳಿದ್ದಾರೆ. ದಿವಂಗತ ಹನುಮಂತಯ್ಯನವರ ಆತ್ಮಕ್ಕೆ ಶಾಂತಿ ದೊರಕಬೇಕಾಗಿದ್ದರೆ, ಕುಮಾರವ್ಯಾಸ ಭಾರತ, ಜೈಮುನಿ ಭಾರತ, ಹರಿಶ್ಚಂದ್ರ ಕಾವ್ಯಗಳನ್ನು ಮುದ್ರಣ ಮಾಡಿಸಿ, ಸುಲಭ ದರದಲ್ಲಿ

ಪ್ರತಿಯೊಬ್ಬರಿಗೂ ದೊರಕುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೆಂಗಲ್ ಹನುಮಂತಯ್ಯ ನವರು ಧಾರ್ಮಿಕ ಕ್ರಾಂತಿಗಾಗಿ ದುಡಿದ ವ್ಯಕ್ತಿ. ಡಾ॥ ಅಂಬೇಡ್ಕರ್‌ರವರು ಸಾಮಾಜಿಕ ಕ್ರಾಂತಿಗಾಗಿ ದುಡಿದ ವ್ಯಕ್ತಿ; ಇವರ ವಿಚಾರಧಾರೆಗಳು ಕನ್ನಡಿಗರ ಮನಮುಟ್ಟುವಂತ ಕೆಲಸವಾಗಿಲ್ಲ. ಇವರ ಸಮಗ್ರ ಕೃತಿಗಳನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಹತ್ತು ರೂಪಾಯಿ ಬೆಲೆಯಲ್ಲಿ ರಾಜ್ಯದ ದಲಿತ ಜನಾಂಗಕ್ಕೆ ಮುಟ್ಟಿಸುವಂತ ನಿರ್ಧಾರ ಕೈಗೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೇ ರೀತಿ ದಲಿತ ಜನಾಂಗದಲ್ಲಿ ಹುಟ್ಟಿ ಕನ್ನಡ ನಾಡಿಗೆ ಕೀರ್ತಿ ತಂದ ಕನಕದಾಸರು ಬರೆದಿರುವಂತ ಪಂಚಕೃತಿಗಳನ್ನು ಪ್ರಕಟಪಡಿಸಿ ಸುಲಭ ಲಾಭ ಬೆಲೆಯಲ್ಲಿ ಹಂಚಬೇಕು. ''ವಿವೇಕ ಚಿಂತಾಮಣಿ'' ಯನ್ನು ಅಚ್ಚು ಹಾಕಿಸಿ ನಾಡಿನ ಜನತೆಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ಅದೇರೀತಿ ನಿಜಗುಣ ಶಿವಯೋಗಿಯವರ ''ಸಮಗ್ರ ಕೃತಿಗಳನ್ನು'' ಕೂಡ ಮುದ್ರಣ ಮಾಡಿಸಿ ಕನ್ನಡಿಗರಿಗೆ ಸುಲಭ ದರದಲ್ಲಿ ಸಿಗುವಂತ ವ್ಯವಸ್ಥೆ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. ಕೊಡಗಿನವರಾದ ನೀವು ಋಣಿಯಾಗಿದ್ದೀರಿ; ಏತಕ್ಕೆಂದರೆ ತೆಲುಗು, ತಮಿಳು, ಮರಾಠಿಯಲ್ಲಿ ಮಾರಾಟವಾಗುತ್ತಿದ್ದ ವಿವೇಕ ಚಿಂತಾಮಣಿಯನ್ನು ಕನ್ನಡದಿಂದ ಸಂಸ್ಕೃತ ಭಾಷೆಗೆ ಕೊಡಗಿನ ದೊರೆ ಲಿಂಗರಾಜು ಅವರು ಭಾಷಾಂತರ ಮಾಡಿ ಪ್ರಕಟಿಸಿ ಮಾಡಿದರು. ಕನ್ನಡ ನಾಡಿನ ಜನತೆಗೆ ಇಂಥ ಮೇರು ಕೃತಿಗಳನ್ನು ಒದಗಿಸಿ ಅವರ ಪ್ರೀತಿಗೆ ಪಾತ್ರರಾಗುತ್ತೀರೆಂದು ಭಾವಿಸಿದ್ದೇನೆ. ಇಷ್ಟಕ್ಕೆಲ್ಲಾ ೨೫ ಲಕ್ಷ ರೂಪಾಯಿಗಳು ಕೂಡ ಖರ್ಚು ಆಗುವುದಿಲ್ಲ. ಇಂಥ ಕೆಲಸಗಳನ್ನು ಮಾಡಿದರೆ ನಿಜವಾಗಿಯೂ ದಿವಂಗತ ಹನುಮಂತಯ್ಯನವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ. ಉಳಿದೆಲ್ಲ ವ್ಯಕ್ತಿಗಳ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ಹೃತ್ಪೂರ್ವಕವಾದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ನನ್ನ ನಾಲ್ಕು ನುಡಿಗಳನ್ನು ಅವರ ಆತ್ಮದ ಮೇಲೆ ಇಡುವುದಕ್ಕೆ ಇಚ್ಛಿಪಡುತ್ತೇನೆ.

೨–೩೦ ಪಿ. ಎಂ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಟ್ಲ). — ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ನಮ್ಮಿಂದ ಅಗಲಿರುವಂಥ ಅನೇಕ ವ್ಯಕ್ತಿಗಳ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಯಾವ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ ಅದೇ ಭಾವನೆಗಳನ್ನು ನಾನು ಕೂಡ ಸಂಪೂರ್ಣವಾಗಿ ಹೊಂದಿದ್ದೇನೆ ಎಂದು ಹೇಳಲಿಕ್ಕೆ ಅಭಿಪ್ರಾಯ ಪಡುತ್ತೇನೆ. ಈ ಸಂದರ್ಭದಲ್ಲಿ ನಾವು ಅವರ ಮಾತುಗಳನ್ನು ಕೇಳಿದಾಗ, ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ಬಗ್ಗೆ, ಸ್ವಾತಂತ್ರ್ಯಾನಂತರ ನಮ್ಮ ದೇಶದ ರಾಜಕೀಯದ ಸಮಗ್ರ ಚಿತ್ರ ನಮ್ಮ ಕಣ್ಣು ಮುಂದೆ ಬಂದಿವೆ. ಹಾಗೆ ಸಂಸತ್ತಿನಲ್ಲಿ, ಈ ಸದನದಲ್ಲಿ ಯಾವ ರೀತಿ ರಾಜಕೀಯ ತಿಕ್ಕಾಟಗಳು ನಡೆದಿವೆ, ಆದರಲ್ಲಿ ಇಂತಹ ಮಹನೀಯರು ಎಷ್ಟೊಂದು ನಿಷ್ಪೆಯಿಂದ ನಮ್ಮ ದೇಶ ಹಾಗೂ ರಾಜ್ಯದ ಹಿತವನ್ನು ತಮ್ಮ ಅಧಿಕಾರಕ್ಕಿಂತಲೂ ಮೇಲ್ಮಟ್ಟದಲ್ಲಿಟ್ಟು ಯಾವ ರೀತಿ ಅವರು ಮಾರ್ಗದರ್ಶನ ನೀಡಿದ್ದಾರೆ ಎಂದು ಅವರ ಮಾತಿನಿಂದ ಅರ್ಥ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಿದೆ. ಶ್ರೀಮಾನ್ ಹನುಮಂತಯ್ಯನವರು ಬಹಳ ಹಿರಿಯರು. ನಾನು ವಿದ್ಯಾರ್ಥಿಯಾಗಿದ್ದಾಗ ಅವರು ಕರ್ನಾಟಕ ವಿಭಜನೆ ಮತ್ತು ಇಲ್ಲಿನ ಜವಾಬ್ದಾರಿ ಸರ್ಕಾರಕ್ಕೆ ಹೋರಾಟ ನಡೆಸಿದವರು. ಇನ್ನು ಶ್ರೀಮತಿ ಸುಮತಿ ಮಡಿಮನ್ ಅವರು ನಮ್ಮ ಜೊತೆಯಲ್ಲಿ ಶಾಸಕರಾಗಿ, ಉಪಾಧ್ಯಕ್ಷರಾಗಿ ಕೆಲಸ ಮಾಡಿದವರು. ಅವರು ಒಳ್ಳೆಯ ಭಾವನೆಯನ್ನು ಹೊಂದಿದ್ದವರು. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಲೋಕಸಭೆಯಲ್ಲಿದ್ದಾಗ ನಾನು ರಾಜ್ಯಸಭೆಯಲ್ಲಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿ ಅವರು ಡೈರಿ ಡೆವೆಲಪ್‌ಮೆಂಟ್, ವ್ಯವಸಾಯ ಅಭಿವೃದ್ಧಿ ಬಗ್ಗೆ ಬಹಳಷ್ಟು ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದರು. ನಾನು ಮತ್ತು ಅವರು ಒಂದೇ ರಾಜ್ಯದಿಂದ ಹೋಗಿದ್ದವರಾದ್ದರಿಂದ ನಾವು ಆಗಾಗ್ಗೆ ಅವರ ಜೊತೆ ಭೇಟಿಯಾದಾಗ ಅವರಿಗೆ ವ್ಯವಸಾಯದ ಬಗ್ಗೆ ಇದ್ದಂತ ಹೆಚ್ಚಿನ ಆಭಿರುಚಿ ತಿಳಿಯುತ್ತಿತ್ತು. ಅದನ್ನು ನೋಡಿದಾಗ ಅವರು ಇನ್ನು ಅನೇಕ ವರ್ಷಗಳ ಕಾಲ ಜೀವಂತ ಉಳಿದಿದ್ದರೆ ಅವರಿಂದ ನಮ್ಮ ರಾಜ್ಯಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲುತ್ತಿತ್ತು. ಶ್ರೀಮಾನ್ ಗೋವಿಂದ ರೆಡ್ಡಿಯವರು ರಾಜ್ಯಸಭೆಯಲ್ಲಿ ಇದ್ದರು ಆಗ ನಾನು ಸಹ ಇದ್ದೆ. ಅವರು ಒಳ್ಳೆಯ ಮೇಧಾವಿಯಾಗಿದ್ದರು. ದೇಶದ ಜನತೆಯ ನಾಯಕರಾಗಿ ವಿಶ್ವಶಾಂತಿಗೋಸ್ಕರ ಅವರು ಸತತ ಕಾಲ ಕಾಳಜಿ ವಹಿಸುತ್ತಿದ್ದರು. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತಕ್ಕ ಸಮ್ಮೇಳನಗಳಲ್ಲಿ ಇವರು ನಮ್ಮ ದೇಶದ ಪ್ರತಿನಿಧಿಯಾಗಿ ಅಲ್ಲಿಗೆ ಹೋಗಿ, ನಮ್ಮ ದೇಶದ ಜನರ ಭಾವನೆಗಳನ್ನು ತಿಳಿಸುತ್ತಿದ್ದರು. ಇವರೆಲ್ಲರ

ಬಗ್ಗೆ, ಇತರ ಸದಸ್ಯರ ಬಗ್ಗೆ, ಇಲ್ಲಿ ತಾವೆಲ್ಲರೂ ವ್ಯಕ್ತ ಪಡಿಸಿದಂಥ ಭಾವನೆಗಳನ್ನು ನಾನು ಕೂಡ ವ್ಯಕ್ತ ಪಡಿಸಿ ಅವರೆಲ್ಲರ ಮಾರ್ಗ ದರ್ಶನ ನಮ್ಮ ಮುಂದಿನ ಕಾರ್ಯಗಳಲ್ಲಿ ಸ್ಫೂರ್ತಿ, ಸರಿಯಾದ ಮಾರ್ಗ ನೀಡಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಕುಮಾರಿ ಪ್ರಮಿಳಾ ಎಸ್. (ಚಾಮರಾಜಪೇಟೆ) —ಸನ್ಮಾನ್ಯ ಅಧ್ಯಕ್ಷರೆ, ನಾವು ಕಳೆದಸಾರಿ ಇಲ್ಲಿ ಸೇರಿದಾಗ ಶ್ರೀಮತಿ ಸುಮತಿ ಮಡಿಮನ್ ಅವರು ನಮ್ಮ ಜೊತೆ ಇದ್ದರು. ಕೇವಲ ೨೨ಳಿ ಜನ ಸದಸ್ಯರು ಇರತಕ್ಕ ಸಂದರ್ಭದಲ್ಲಿ ನಾವು ಕೇವಲ ೮ ಜನ ಮಹಿಳೆಯರು ಮಾತ್ರ ಇದ್ದೆವು. ನಮ್ಮಲ್ಲಿ ಹಿರಿಯರಾದಂಥ ಶ್ರೀಮತಿ ಸುಮತಿ ಮಡಿಮನ್ ಅವರು ನಮ್ಮೆಲ್ಲರಿಗೂ ಮಾರ್ಗದರ್ಶನವನ್ನು ತೋರಿ ಸುತ್ತಿದ್ದರು. ಆದರೆ ಅವರು ಇವೊತ್ತು ನಮ್ಮನ್ನು ಅಗಲಿ ದೂರ ಹೋಗಿದ್ದಾರೆ. ಅವರು ಹೆಣ್ಣು ಮಕ್ಕಳ ಬಗ್ಗೆ ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕೆ ಹೋರಾಟ ಮಾಡುತ್ತಿದ್ದರು. ಅವರು ಯಾವ ರೀತಿ ಇದ್ದರು ಏನನ್ನುವುದಕ್ಕೆ, ಒಂದು ಉದಾಹರಣೆ ಹೇಳಬೇಕು ಎಂದರೆ 'ತುಂಬಿದ ಕೊಡ ತುಳುಕುವುದಿಲ್ಲ' ಎಂದು ನಾವು ಏನು ಹೇಳುತ್ತೇವೆ ಆ ರೀತಿಯಲ್ಲಿ ಇದ್ದರು. ಅವರು ಶ್ರೀಮಂತ ಮನೆತನದಿಂದ ಬಂದಿದ್ದರೂ ಕೂಡ ಅವರ ಸ್ವಭಾವ ಅಷ್ಟೊಂದು ಒಳ್ಳೆಯದಾಗಿತ್ತು. ಅವರ ಒಂದು ಇಷ್ಟ, ಅವರ ಒಂದು ಹೆಸರು, ಅವರು ಹೆಣ್ಣುಮಕ್ಕಳಿಗೆ ಮಾಡಿರತಕ್ಕ ಸೇವೆ ಕರ್ನಾಟಕದ ಪ್ರತಿಯೊಂದು ಮನೆ ಮನೆಯಲ್ಲೂ ಉಳಿಯಬೇಕೆಂದು ಪ್ರತಿಯೊಬ್ಬ ಮಹಿಳೆ ಆಶಿಸತಕ್ಕ ಸಂದರ್ಭ. ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಮಾನ್ ಹನುಮಂತಯ್ಯನವರ ಪ್ರತಿಮೆಯನ್ನು ಮಾಡಿಸಿ ಅವರ ಹೆಸರು ತಲೆತಲಾಂತರ ಉಳಿಯುವ ವ್ಯವಸ್ಥೆ ಮಾಡಿದ್ದಾರೆ. ವೆಸ್ಟರನ್ ಕಂಟ್ರಿಗಳಲ್ಲಿ ನಿಧನರಾದಂಥ ಹಿರಿಯ ರಾಜಕಾರಣಿಗಳಿಗೆ, ಕವಿಗಳಿಗೆ, ಸಾಹಿತಿಗಳಿಗೆ, ವೆಸ್ಟ್ ಮಿನಿಸ್ಟರ್ ಅಬೆ ಎಂದು ಮುಂದಿನ ಪೀಳಿಗೆಯವರು ನೆನೆದುಕೊಳ್ಳಲಿಕ್ಕೆ ಮಾಡಿದ್ದಾರೆ. ಆದೇ ರೀತಿ ನಮ್ಮ ರಾಜ್ಯದಲ್ಲೂ ಕೂಡ ನಮ್ಮನ್ನು ಅಗಲಿ ಹೋದ ಹಿರಿಯ ರಾಜಕಾರಣಿಗಳು ಸಾಹಿತಿಗಳು, ಕವಿಗಳು ಇವರೆಲ್ಲರ ಜೀವನವನ್ನು ಮುಂದಿನ ಪೀಳಿಗೆಯವರು ನೋಡುವ ಹಾಗೆ ಹಾಗೂ ಶ್ರೀಮತಿ ಸುಮತಿ ಮಡಿಮನ್ ಅವರ ಒಂದು ಪ್ರತಿಮೆಯನ್ನು ಮಾಡಲಿಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಎಲ್ಲ ಮಹಿಳೆಯರ ಪರವಾಗಿ ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಶ್ರೀಮತಿ ಸುಮತಿ ಮಡಿಮನ್ ಅವರು ಧಾರವಾಡ ಜಿಲ್ಲೆಯವರು, ಸಮಾಜದಲ್ಲಿ ಶೈಕ್ಷಣಿಕ ವಿಷಯಗಳಲ್ಲಿ ಬಹಳ ವಾದ ಆಸಕ್ತಿ ಇದ್ದಂಥವರು ಅವರ ಹೆಸರು ಚಿರಂತರವಾಗಿ ಉಳಿಯಬೇಕು. ಅವರು ಕಾಯಿಲೆಯಲ್ಲಿ ನರಳಿ ವಿದೇಶಕ್ಕೆ ಹೋಗಬೇಕಾಗಿ ಬಂತು. ಅಂತಹ ಕಾಯಿಲೆ ಇನ್ನು ಮುಂದೆ ಭಾರತದಲ್ಲಿರತಕ್ಕ ಹೆಣ್ಣು ಮಕ್ಕಳಿಗೆ ಬರಬಾರದು. ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಆರೋಗ್ಯ ಮಂತ್ರಿಗಳು, ಅವರ ಹೆಸರಿನಲ್ಲಿ ಒಂದು ರಿಸರ್ಚ್ ಇನ್‌ಸ್ಟಿಟ್ಯೂಟ್, ಒಂದು ಆಸ್ಪತ್ರೆಯನ್ನು ಮಕ್ಕಳ ಮತ್ತು ಮಹಿಳೆಯರ ಪರವಾಗಿ ತೆರೆದು ಆ ಕಾಯಿಲೆ ಬರದಂತೆ ನೋಡಿಕೊಳ್ಳುವ ಅಗತ್ಯವಿದೆ. ನಾನು ಕಳೆದ ಎರಡು ತಿಂಗಳು ಗಳಿಂದಲೂ ನೋಡುತ್ತಿದ್ದೇನೆ. ಪ್ರತಿಯೊಂದು ಜಾತಿಯವರು ಮೆಡಿಕಲ್ ಕಾಲೇಜ್ ಕೇಳುತ್ತಿದ್ದಾರೆ. ಜಾತಿ ಜಾತಿಗೊಂದು ಮೆಡಿಕಲ್ ಕಾಲೇಜು ಕೇಳತಕ್ಕದ್ದು ನಡೆಯುತ್ತಿದೆ. ಶ್ರೀಮತಿ ಸುಮತಿ ಮಡಿಮನ್ ಅವರ ಕ್ಷೇತ್ರವಾದ ಧಾರವಾಡದಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದಂಥ ಒಂದು ಮೆಡಿಕಲ್ ಕಾಲೇಜ್ ತೆಗೆಯಬೇಕು. ಇವೊತ್ತು ಎಲ್ಲರಿಗೂ ಮೆಡಿಕಲ್ ಕಾಲೇಜ್ ಕೊಡುವುದಾದರೆ, ಜಾತಿ, ಭೇಧ ಇಲ್ಲದಂತೆ, ಡೊನೇಷನ್ ತೆಗೆದುಕೊಳ್ಳದಂತೆ, ಶ್ರೀಮತಿ ಸುಮತಿ ಮಡಿಮನ್ ಅವರ ಹೆಸರಿನಲ್ಲಿ ಚಿರಂತರ ವಾಗಿ ಉಳಿಯುವುದಕ್ಕೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಂದು ಮೆಡಿಕಲ್ ಕಾಲೇಜು ತೆರೆಯಬೇಕು ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಇನ್ನೂ ಇಬ್ಬರು ಗಣ್ಯ ವ್ಯಕ್ತಿ ಗಳು ನಮ್ಮನ್ನು ಅಗಲಿ ಹೋಗಿದ್ದಾರೆ. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರನ್ನು ನಾನು ನನ್ನ ವಿದ್ಯಾರ್ಥಿ ಜೀವನದಿಂದ ನೋಡಿದ್ದೇನೆ. ಅವರು ಸಣ್ಣ ಮಕ್ಕಳು ಮಾತನಾಡತಕ್ಕ ಆಭ್ಯಾಸ, ಕಲಿ, ಬೆಳೆಸಬೇಕೆಂದು ಹೇಳುತ್ತಿದ್ದ ಚಿತ್ರ ಇನ್ನು ನನ್ನ ಕಣ್ಣು ಮುಂದೆ ಕಾಣುತ್ತಿದೆ. ಕಿರುವಾಗ್ಮೀಯ ಸಂಘ ಎಂದು ಕಟ್ಟಿದಾಗ ಅದರ ಉದ್ಘಾಟನೆಯನ್ನು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಮಾಡಿದ ಸಂದರ್ಭದಲ್ಲಿ ಅವರೇ ಸ್ವಹಸ್ತದಿಂದ ೫೦೦ ರೂಪಾಯಿಗಳನ್ನು ಕೊಟ್ಟು, ಮಾತನಾಡುವ ಕಲೆ ಹೆಚ್ಚು ಬೆಳೆಯಲಿ ಎಂದು ಹೇಳಿ ಸಂಘ ಸ್ಥಾಪನೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರು ಅಂತಹವರು ಇವೊತ್ತು ಇಲ್ಲ, ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಹೆಸರು ಚಿರಂತರವಾಗಿ ಉಳಿಯಬೇಕು. ಇನ್ನು ಸೋಲೂರು ಸಿದ್ದಪ್ಪನವರು ನನ್ನ ಕ್ಷೇತ್ರದಿಂದ ಬಂದಿದ್ದವರು, ಡೆಲ್ಲಿಯ ವಿಚಾರವಾಗಲಿ, ಕರ್ನಾಟಕದ ವಿಚಾರವಾಗಲಿ, ಅವರು ನನಗೆ ಬೆಳಿಗ್ಗೆ ೬ ಗಂಟೆಗೆ ಮುಂಚೆ ಫೋನ್ ಮಾಡಿ ಪ್ರಮಿಳಾ ನೀವು

ಪೇಪರ್ ಓದಿದ್ದೀರಾ ಈ ವಿಷಯದ ಬಗ್ಗೆ ನೀವು ಏನು ಯೋಚನೆ ಮಾಡಿದ್ದೀರಾ ಎಂದು ಜ್ಞಾಪಕ ಮಾಡುತ್ತಿದ್ದರು. ಅಂತಹವರು ಇವ್ವೊತ್ತು ಇಲ್ಲ. ಅವರ ಹೆಸರು ಉಳಿಯಬೇಕಾಗಿದೆ. ಸರ್ಕಾರದ ವತಿಯಿಂದ ಶ್ರದ್ಧಾಂಜಲಿಯನ್ನು ಅರ್ಪಿಸಿರುವುದರ ಜೊತೆಗೆ ನನ್ನ ಧ್ವನಿಗೂಡಿಸುತ್ತೇನೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಟ್ಟು, ಅವರ ಕುಟುಂಬ ವರ್ಗದವರು ದುಃಖವನ್ನು ಭರಿಸುವಂತ ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಸನ್ಮಾನ್ಯ ಅಧ್ಯಕ್ಷರೆ, ದಿವಂಗತರಾದ ಅನೇಕ ಶಾಸಕ ಮಿತ್ರರನ್ನು ಸಮರ್ಥನೆ ಮಾಡಿಕೊಳ್ಳತಕ್ಕ ಕಾಲ ಇದು. ಈ ಒಂದು ಶ್ರೇಣಿಯಲ್ಲಿ ಅನೇಕ ಮಹನೀಯರು ದೇಶಕ್ಕೆ ಅವರ ಕೈಲಾದ ಅನೇಕ ಮಹತ್ತರವಾದ ಕಾರ್ಯಗಳನ್ನು ಮಾಡಿ ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡಿದ್ದಾರೆ. ಬಹು ಮುಖ್ಯವಾಗಿ ನಮ್ಮ ಜ್ಞಾಪಕದಲ್ಲಿ ಸತತವಾಗಿರುವಂತಹ ವ್ಯಕ್ತಿ ಎಂದರೆ ದಿವಂಗತ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು. ಅವರ ವಿಷಯದಲ್ಲಿ ಎಷ್ಟು ಹೇಳಿದರೂ ಕಡಿಮೆ ಎಂದು ನನ್ನ ಭಾವನೆ. ಅವರು ಯಾವ ಕೆಲಸ ಮಾಡುವುದಕ್ಕೆ ಪ್ರಯತ್ನಪಟ್ಟರು ಮುಂದಿನ ಪೀಳಿಗೆಗೆ ಏನು ಲಾಭವಿದೆ ಎನ್ನುವುದನ್ನು ಮನಸ್ಸಿನಲ್ಲಿ ಅರ್ಥ ಮಾಡಿಕೊಂಡು ಅಂತಹ ಕೆಲಸಗಳನ್ನು ಮಾಡುತ್ತಿದ್ದರು. ಅವರನ್ನು ನಾವು ಸಮರ್ಥನೆ ಮಾಡಿಕೊಳ್ಳುವಾಗ ನೋಡಿದರೆ ಅವರ ಕಾಲದಲ್ಲಿ ಮುಖ್ಯವಾದಂಥಾದ್ದು ಏನು ಮಾಡಿದ್ದಾರೆ ಎಂದರೆ ವಿಧಾನ ಸೌಧದ ರಚನೆ ಅವರು ಇದ್ದಾಗ ನಡೆಯಿತು. ಇದೇ ರೀತಿ ಹಲವಾರು ವಿಚಾರಗಳು ಉಂಟು. ಅವರಿಗೆ ಒಂದು ಮಾರುತಿ ದೇವಾಲಯ ಕಟ್ಟಿಸಬೇಕೆಂದು ಮನಸ್ಸಿನಲ್ಲಿ ಬಂದು ಅದನ್ನು ಚೆನ್ನಾಗಿ ಕಟ್ಟಿಸಿ ಮುಗಿಸಿದ್ದಾರೆ. ದೇವಾಲಯಗಳು ಎಂದರೆ ಅವು ನಮ್ಮ ಸಂಸ್ಕೃತಿ ಮತ್ತು ಧರ್ಮ ವಿಚಾರ ಕೇಂದ್ರಗಳಾಗಿರಬೇಕು ಎಂಬ ಭಾವನೆಯನ್ನು ಮಹಾತ್ಮ ಗಾಂಧಿಯವರು ಏನು ಹೇಳುತ್ತಿದ್ದರು, ಆ ರೀತಿಯಲ್ಲಿ ನಮ್ಮ ದೇವಾಲಯಗಳು ಮತ್ತು ಮಠಗಳು ಇದ್ದು ಬೆಳೆಯಬೇಕು ಎಂಬ ಬಗ್ಗೆ ಅವರು ನುಡಿದು ತೋರಿಸಿ ಆ ಮಾರ್ಗದಲ್ಲಿ ಅಚ್ಚಳಿಯದಂತೆ ಮಾಡಿದ್ದಾರೆ. ನೊಂದ ಜನರಿಗೆ, ದೀನದಲಿತರಿಗೆ ಸಹಾಯ ಮಾಡಬೇಕೆಂಬ ಸಂದರ್ಭ ಬಂದಾಗಲೆಲ್ಲಾ ಅವರು ಹಿಂದು ಮುಂದು ನೋಡದೆ ಉದಾರ ಮನಸ್ಸಿನಿಂದ ಸಹಾಯ ಮಾಡಿದ್ದಾರೆಂಬುದನ್ನು ನಾವು ಸ್ಮರಿಸಿಕೊಳ್ಳಬೇಕಾಗಿದೆ. ನಮ್ಮ ಯುವ ಜನತೆ, ಮುಂದಿನ ಪೀಳಿಗೆಯವರು ರಾಷ್ಟ್ರೀಯತೆಯನ್ನು ಬೆಳೆಸಿಕೊಳ್ಳಬೇಕಾದರೆ ಯಾವ ರೀತಿ ಇರಬೇಕು, ಯಾವ ರೀತಿಯಲ್ಲಿ ಶುದ್ಧ ಹಸ್ತದಿಂದ ದೇಶ ಸೇವೆಯನ್ನು ಮಾಡಬೇಕೆಂಬ ವಿಚಾರದಲ್ಲಿ ಅವರು ತುಂಬಾ ಆಸಕ್ತಿ ಹೊಂದಿದ್ದರು. ಇಲ್ಲಿ ಒಂದು ಮಾತು ಹೇಳಬೇಕೆಂದರೆ, ಒಂದು ಸಾರಿ ನೆಹರೂರವರಿಗೂ ಮತ್ತು ಕೆಂಗಲ್ ಹನುಮಂತಯ್ಯನವರಿಗೂ ಮಧ್ಯೆ ನಡೆದಂಥ ಒಂದು ಸಂಭಾಷಣೆ ನನಗೆ ಜ್ಞಾಪಕ ಇದೆ. ಒಮ್ಮೆ ಕೆಂಗಲ್ ಹನುಮಂತಯ್ಯನವರಮೇಲೆ ಅವಿಶ್ವಾಸ ನಿರ್ಣಯ ಬಂದಾಗ ಪಂಡಿತ್ ನೆಹರೂರವರು ಇಲ್ಲಿಗೆ ಬಂದಿದ್ದರು. ಸಿಡುಕಿನ ಸ್ವಭಾವಕ್ಕೆ ಇವರಿಬ್ಬರೂ ದೂರವಾದ ವ್ಯಕ್ತಿಗಳೇನೂ ಅಲ್ಲ. ಅಂಥ ಸಂದರ್ಭದಲ್ಲಿ ಕೂಡ ಪಂಡಿತ್ ನೆಹರೂರವರ ಬಾಯಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಕುರಿತು 'Hanumathayya you are said to be doing very good work and known to be a very good Administrator' ಎಂದು ಹೇಳುವಾಗ ಇಂಥ ಚಿಕ್ಕ ಪ್ರಸಂಗ ನಡೆಯುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ಹೇಳಿದರು. ಸಾಮಾನ್ಯವಾಗಿ ಯಾರೇ ಆಗಲಿ ಅವರು ಬದುಕಿದ್ದಾಗ ಅವರ ತತ್ವಗಳನ್ನು ಕಲಿಯುವವರು ಕಡಿಮೆ, ಅವರು ಸತ್ತಮೇಲೆ ಅವರನ್ನು ಹೊಗಳುವುದು ಜಾಸ್ತಿ.

ಇನ್ನು ಮಾನ್ಯ ಸೋಲೂರು ಸಿದ್ದಪ್ಪನವರ ವಿಚಾರವನ್ನು ಎದುರು ಪಕ್ಷದ ನಾಯಕರು ಸಾಕಷ್ಟು ಹೇಳಿದ್ದಾರೆ. ಅಧಿಕಾರಿಗಳಿಂದ ಯಾವ ರೀತಿಯ ಕೆಲಸವನ್ನೇ ಆಗಲಿ ಅವರು ಮಾಡಿಸಬೇಕಾದರೂ ಬಹಳ ಚಾಣಾಕ್ಷತನದಿಂದ ಮಾಡಿಸುತ್ತಿದ್ದರು.

ಅದರಂತೆಯೇ ಶ್ರೀ ಎಂ. ವಿ. ಕೃಷ್ಣಪ್ಪನವರೂ ನಾನೂ ಜೊತೆಯಲ್ಲೇ ಓದು ಕಲಿತವರು. ದೇಶಕ್ಕಾಗಿ ದುಡಿಯುವವರ ಪೈಕಿ ಒಳ್ಳೆಯ ಪ್ರತಿಭಾವಂತ ವ್ಯಕ್ತಿ ಎನಿಸಿಕೊಂಡಿದ್ದರು.

ಇವರಂತೆಯೇ ಶ್ರೀಮತಿ ಮಡಿಮನ್‌ರವರೂ ಕೂಡ. ಅವರು ಈ ಸದನದ ಉಪಾಧ್ಯಕ್ಷಣಿಯಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಯಾವ ಸದಸ್ಯರ ಮನಸ್ಸಿಗೂ ನೋವಾಗದಂತೆ, ಎಲ್ಲ ಸದಸ್ಯರಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಡುತ್ತಿದ್ದರು. ಯಾವಾಗಲೂ ಹಸನ್ಮುಖಿಗಳಾಗಿ ಕೆಲಸ ಮಾಡುತ್ತಿದ್ದರು. ಸಾಮಾನ್ಯವಾಗಿ ಆ ಸ್ಥಾನದಲ್ಲಿ ಕೂತು ಕೆಲಸ ಮಾಡುವವರು "ಸೈ" ಎನಿಸಿಕೊಳ್ಳು

ವುದು ಬಹಳ ಕಷ್ಟ ಎಂಬುದನ್ನು ನಾವು ನೋಡುತ್ತಿದ್ದೇವೆ. ಅಂಥಾದ್ದರಲ್ಲೂ ಅವರು ಸೈ ಎನಿಸಿಕೊಂಡಿದ್ದಾರೆ. ಅವರಲ್ಲಿದ್ದ ಒಳ್ಳೆಯ ಗುಣಗಳು ನಮಗೆ ಮಾರ್ಗದರ್ಶನವಾಗಿ ಜೀವನ ಸಾಗಿಸಲು ಸಹಾಯಕವಾಗಲಿಂದು ಹೇಳಿ ಈ ಎಲ್ಲ ಮೃತರ ಆತ್ಮಗಳಿಗೆ ಚಿರಶಾಂತಿಯನ್ನೂ ಮತ್ತು ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಸರ್ವ ಶಕ್ತಿಯನ್ನೂ ಆ ಭಗವಂತನು ಕರುಣಿಸಲೆಂದು ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—Now, I request the Hon. Members to stand in silence for a minute as a mark of respect to the deceased.

(The House stood in Silence for a minute as a mark of respect to the memory of the departed)

MR. SPEAKER.—Now, the House stands adjourned to meet again at 1.00 P. M. tomorrow.

The House adjourned at Forty-five minutes past Two of the Clock to meet again on Friday, 30th January 1981 at One of the Clock.